ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಗುರುವಾರ ೬ನೇ ಏಪ್ರಿಲ್ ೧೯೯೫, ಸಾಯನ ಸೌರ ಚೈತ್ರ ಶಕ ೧೯೧೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೦.೦೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ ಎಂ.ಎಸ್. ಪಾಟೀಲ್)ರವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

ಉಪಾಧ್ಯಕ್ಷರು : ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್ ಅವರು ದಿನಾಂಕ 6-4-1995ರಂದು ನಿಧನರಾದುದನ್ನು ಈ ಸದನಕ್ಕೆ ವಿಷಾಧದಿಂದ ತಿಳಿಸುತ್ತಿದ್ದೇನೆ.

ಶ್ರೀಯುತರು ನಾಲ್ಕು ಹಾಗೂ ಐದನೇ ವಿಧಾನ ಸಭೆಗೆ ಆಯ್ಕೆಯಾಗಿ, ಹತ್ತನೇ ವಿಧಾನ ಸಭೆಗೆ ಯಲಹಂಕ ವಿಧಾನ ಸಭಾಕ್ಷೇತ್ರದಿಂದ ಚುನಾಯಿತರಾಗಿದ್ದರು. ದಲಿತ ಹಾಗೂ ಕಾರ್ಮಿಕರ ಏಳಿಗೆಗಾಗಿ ಶ್ರಮಿಸಿದ್ದವರು. ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯ ಪಾತ್ರವಹಿಸಿದ್ದ ಶ್ರೀಯುತರು ಅನೇಕ ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿ ಸಮಾಜದ ಕೆಳವರ್ಗದ ಜನರ ಅಭ್ಯುದಯಕ್ಕೆ ಶ್ರಮಿಸಿದ್ದರು.

ಸಮಾಜವಾದದ ಬಗ್ಗೆ ಅಪಾರ ನಂಬಿಕೆ ಹೊಂದಿದ್ದ ಶ್ರೀಯುತರು 'ನಾ ಕಂಡ ಭಾರತೀಯ ಹರಿಜನ ಹಾಗೂ ಅಸ್ಪೃಶ್ಯತೆ ಮತ್ತು ಜಾತಿಯತೆ' ಎಂಬ ಎರಡು ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದರು.

+ ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳ) : ಸನ್ಮಾನ್ಯ ಉಪಾಧ್ಯಕ್ಷರೇ, ಈ ದಿನ ಬೆಳಿಗ್ಗೆ ಸುಮಾರು 7.00 ಗಂಟೆ ಸಮಯದಲ್ಲಿ ಈ ಸದನದ ಗೌರವಾನ್ವಿತ ಸದಸ್ಯರಾದಂಥ ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣರವರು ನಿಧನ ಹೊಂದಿರತಕ್ಕ ಸುದ್ದಿ ತಿಳಿದು ನನಗೆ ಸಾಕಷ್ಟು ದುಃಖವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸುಮಾರು 10 ವರ್ಷಗಳ ಕಾಲ ನಾವು ಆ ಕಡೆ ಕುಳಿತು ಕೆಲಸ ಮಾಡುತ್ತಿದ್ದೆವು. ಶ್ರೀ ವಾಟಾಳ್ ನಾಗರಾಜ್‌ರವರು ಈ ಸಭೆಯಲ್ಲಿದ್ದಾರೆ, ನಂಜೇಗೌಡರು ಬಂದಿಲ್ಲ. ನಾವೆಲ್ಲಾ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡತಕ್ಕಂಥ ಕಾಲದಲ್ಲಿ ಜಯಪ್ರಕಾಶ್ ನಾರಾಯಣ್‌ರವರು ಉತ್ತರ ಕನ್ನಡ ಜಿಲ್ಲೆಯಿಂದ ಗೆದ್ದು ಬರುತ್ತಿದ್ದರು. ಆ ಮೂಲೆಯಲ್ಲಿ ಕುಳಿತುಕೊಳ್ಳುತ್ತಿದ್ದೆವು. ನನ್ನ ಅನುಭವದಲ್ಲಿ, ಅವರು ಭಾಷಣಕ್ಕೆ ಎದ್ದು ನಿಂತರೆ ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕಂಥ ದುರ್ಬಲ ವರ್ಗದವರ ಬಗ್ಗೆ ಯಾವಯಾವ ಯೋಜನೆಗಳಿವೆ, ಅವಕ್ಕೆ ಸರ್ಕಾರದ ನಿಯಮಗಳೇನು? ಕೇಂದ್ರ ಸರ್ಕಾರದ ನಿಯಮಗಳೇನು? ರಾಜ್ಯ ಸರ್ಕಾರದ ನಿಯಮಗಳೇನು ಎನ್ನುವ ಎಲ್ಲಾ ನಿಯಮಗಳ ಪ್ರತಿಗಳನ್ನು ಕೈಯಲ್ಲಿ ಹಿಡಿದುಕೊಂಡು ವಾದ ಮಾಡುತ್ತಿದ್ದರು. ಅಷ್ಟೊಂದು ಕಳಕಳಿಯಿತ್ತು ಅವರಿಗೆ. ನಾನು ಅನೇಕ ಸಾರಿ ಅವರನ್ನು ತಮಾಷೆ ಮಾಡುತ್ತಿದ್ದೆ, ನಿಮಗೆ ಈ 18 ಪರ್ಸೆಂಟ್ ಬಿಟ್ಟರೆ ಬೇರೆ ಮಾತನಾಡುವುದಕ್ಕೆ ಬರುವುದಿಲ್ಲವೇ ಎಂದು ನಾನು ಮತ್ತು ವಾಟಾಳ್ ನಾಗರಾಜ್ ಅವರನ್ನು ಗೇಲಿ ಮಾಡುತ್ತಿದ್ದಂಥ ಸನ್ನಿವೇಶ ನೆನಪಿದೀ. ಅವರು ಅಷ್ಟೊಂದು ಕಳಕಳಿಯುಳ್ಳವರು.

ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ, ರಾಜ್ಯ ಸರ್ಕಾರದವರು ಕೊಡತಕ್ಕಂಥ, ಹಣ ಮತ್ತು ಅದನ್ನು ಹೇಗೆ ಬಳಕೆ ಮಾಡಬೇಕು ಎನ್ನುವಂಥ ನಿಯಮಗಳು ಏನಿವೆ ಅವುಗಳನ್ನೆಲ್ಲಾ ಕ್ರೊಢೀಕರಿಸಿ ಎಳೆಎಳೆಯಾಗಿ ಬಿಡಿಸಿ ಸದನದಲ್ಲಿ ಚರ್ಚೆ ಮಾಡತಕ್ಕಂಥ, ಅತ್ಯಂತ ಪ್ರಾಮಾಣಿಕ ಕಳಕಳ ಹೊಂದಿದ್ದಂಥ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಅವರು ಇತ್ತೀಚೆಗೆ ಅಂದರೆ 3-4 ತಿಂಗಳುಗಳಿಂದ ಈ ಸದನದ ಕಾರ್ಯಕಲಾಪಗಳಲ್ಲಿ ಹೆಚ್ಚು ಭಾಗವಹಿಸಲಿಕ್ಕೆ ಆಗಿಲ್ಲ. ಹತ್ತು ವರ್ಷಗಳ ಹಿಂದೆ ಇದ್ದಂಥ ಸದಸ್ಯರುಗಳು ಈಗಲೂ ಯಾರಾದರೂ ಇದ್ದರೆ ಇದನ್ನು ನೆನಪಿಸಿಕೊಳ್ಳಬಹುದು. ಅವರು ಅಷ್ಟೊಂದು ವಾಗ್ಮಿಗಳು. ಬಡವರ ಬಗ್ಗೆ ಅದರಲ್ಲೂ ಸಮಾಜದಲ್ಲಿ ಅತ್ಯಂತ ದುರ್ಬಲವರ್ಗದವರ ಬಗ್ಗೆ, .ತುಳಿತಕ್ಕೆ ಸಿಕ್ಕಿದವರ ಬಗ್ಗೆ, ಕಳಕಳಿ ಹೊಂದಿದಂಥ ಪ್ರಾಮಾಣಿಕವಾದ ಸದಸ್ಯರಾಗಿದ್ದಂಥ ವ್ಯಕ್ತಿ ಇವತ್ತುನಮ್ಮನ್ನು ಅಗಲಿ ಹೋಗಿದ್ದಾರೆ. ಅಷ್ಟೇ ಅಲ್ಲ, ಸಾಕಷ್ಟು ವಿದ್ಯಾಸಂಸ್ಥೆಗಳನ್ನು ಕೂಡ ಕಟ್ಟಲಿಕ್ಕೆ ಶಕ್ತಿ ಮೀರಿ ದುಡಿದಿದ್ದಾರೆ. ಬಹಶಃ ಅವರು ತಮ್ಮ ಆರೋಗ್ಯದ ಕಡೆ ಗಮನ ಕೊಡದೇ, ಸಂಪೂರ್ಣವಾಗಿ ವಿದ್ಯಾ ಸಂಸ್ಥೆಗಳ ಶ್ರೇಯಸ್ಸಿಗೆ ಕೆಲಸ ಮಾಡಿದ್ದೇ ಇವತ್ತು ಇಂಥ ಒಂದು ಆಘಾತಕ್ಕೆ ಕಾರಣವಾಯಿತು ಎಂದು ನಾನು ಭಾವಿಸಿದ್ದೇನೆ. 5 ದಿನಗಳ ಹಿಂದೆ ಅವರು ವಿಧಾನಸೌಧದ ಮುಂಭಾಗದಲ್ಲಿ ಹೋಗುವಾಗ ಹೃದಯವೇದನೆ ಪ್ರಾರಂಭವಾಯಿತು ಎಂದು ಹೇಳಿದರು. ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ನಾನು ಆಸ್ಪತ್ರೆಗೆ ಹೋಗಿ ಅಲ್ಲಿನ ವೈದ್ಯರು ಮತ್ತು ಪರಿಣತರನ್ನು ಕರೆಸಿ ಮಾತನಾಡಿದೆ.

ಇಲ್ಲಿ ಟ್ರೀಟ್‌ಮೆಂಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದರೆ ಅಮೇರಿಕಕ್ಕೆ ಬೇಕಾದರೆ ವಿಶೇಷ ವಿಮಾನದಲ್ಲಿ ಕಳುಹಿಸಿಕೊಡುತ್ತೇನೆ. ಏನಾದರೂ ಪ್ರಯೋಜನ ಆಗುತ್ತದೆಂದರೆ ಬಾಸ್ಟಿನ್‌ಗೆ ಕರೆದುಕೊಂಡು ಹೋಗಿ. ಇದಕ್ಕೆ 10 ಲಕ್ಷ ರೂಪಾಯಿ ಖರ್ಚಾದರೂ ಸರ್ಕಾರ ವ್ಯವಸ್ಥೆ ಮಾಡುತ್ತದೆ ಎಂದು ಹೇಳಿದ್ದೆ. ಆದರೆ ಅವರು ಇರತಕ್ಕಂಥ ಸನ್ನಿವೇಶದಲ್ಲಿ ಅವರನ್ನು ಎಲ್ಲಿಗೂ ಕರೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ ಎಂದು ವೈದ್ಯರು ಹೇಳಿದರು. ಮದ್ರಾಸಿನ ಅಪೊಲೋ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಡಾ॥ ಚಿರಿಯನ್‌ರವರಿಂದ ಆಪರೇಷನ್ ಮಾಡಿಸೋಣ ಎನ್ನುವ ಒಂದು ತೀರ್ಮಾನವನ್ನು ನಿನ್ನೆ ರಾತ್ರಿ ತೆಗೆದುಕೊಂಡೆವು. ಆದರೆ ವಿಧಿಯ ಆಟಕ್ಕೆ ನಾವೆಲ್ಲಾ ತಲೆಬಾಗಲೇಬೇಕಾಗುತ್ತದೆ. ಅವರು ಇಂದು ಬೆಳಿಗ್ಗೆ ನಮ್ಮನ್ನು ಅಗಲಿ ಹೋಗಿದ್ದಾರೆ. ಈ ಸಂದರ್ಭದಲ್ಲಿ ಅವರ ಕುಟುಂಬ ವರ್ಗದವರಿಗೆ ಆಗಿರುವಂಥ ದುಃಖವನ್ನು ನಾವು ಔಪಚಾರಿಕವಾದ ಮಾತುಗಳಿಂದ ಶಮನ ಮಾಡುವುದು ಕಷ್ಟ, ಇದು ನಮಗೂ ಗೊತ್ತಿದೆ. ಆದರೂ ಈ ಸಂದರ್ಬದಲ್ಲಿ ಇದನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ದಯಾಮಯನಾದ ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಮತ್ತೆ ಅವರ ಕುಟುಂಬದವರಿಗೆ ಈ ಒಂದು ಆಘಾತದಿಂದಾಗಿರತಕ್ಕ ದುಃಖವನ್ನು ಶಮನ ಮಾಡಿಕೊಳ್ಳಲು ಶಕ್ತಿಯನ್ನು ನೀಡಲಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಉಪಾಧ್ಯಕ್ಷರೆ ನಮ್ಮ ಮಧ್ಯೆ ಇದ್ದಂಥ ಜಯಪ್ರಕಾಶ್ ನಾರಾಯಣ್ ಅವರು ಇವತ್ತು ನಮ್ಮನ್ನು ಅಗಲಿದ್ದಾರೆ ಎನ್ನುವುದನ್ನು ನಂಬುವುದಕ್ಕೆ ಸಾಧ್ಯವಗುತ್ತಿಲ್ಲ. ನಾಲ್ಕಾರು ದಿನಗಳ ಹಿಂದೆ ಅವರು ಮೆಟ್ಟಿಲು ಇಳಿಯಬೇಕಾದರೆ ಜಾರಿ ಬಿದ್ದದ್ದೇ ನೆಪವಾಗಿ ಆಸ್ಪತ್ರೆ ಸೇರಿದಂಥವರನ್ನು ಇವತ್ತು ಈ ರೀತಿ ಅವರನ್ನು ಕಳೆದುಕೊಂಡಿರುವಂಥ ಪರಿಸ್ಥಿತಿ ಬಂದಿದೆ. ಶಿಕ್ಷಣ ಕ್ಷೇತ್ರದಲ್ಲಿ ಅವರ ಸೇವೆ ತುಂಬಾ ಅಮೋಘವಾದುದು. ರಾಜಾಜಿನಗರದ ಇಂಜಿನಿಯರಿಂಗ್ ಕಾಲೇಜನ್ನು ಬೃಹದ್ಕಾರವಾಗಿ ಬೆಳೆಸಿ ಸಾವಿರಾರು

ಜನ ದೀನದಲಿತರಿಗೆ ಜ್ಞಾನಜ್ಯೋತಿಯನ್ನು ನೀಡುವಲ್ಲಿ ಅವರು ಯಶಸ್ವಿಯಾಗಿದ್ದರು. ಅಂಬೇಡ್ಕರ್ ಮೆಡಿಕಲ್ ಕಾಲೇಜಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಅವರ ಜನಪ್ರಿಯತೆ ಎಷ್ಟಿತ್ತೆಂದರೆ ಅವರು ಒಂದು ಬಾರಿ ಸಿರ್ಸಿಯಿಂದ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದರು. ಮೂರನೇ ಬಾರಿ ಶಾಸಕರಾಗಿ ಸೇವೆ ಸಲ್ಲಿಸುವ ಅವಕಾಶ ಅವರಿಗೆ ಸಿಕ್ಕಿತ್ತು. ಅವನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಯರನ್ನಾದರೂ ಕೇಳಿ. ಅವರಲ್ಲಿರತಕ್ಕಂಥ ಒಂದು ಉದಾರವಾದ ಗುಣವೆಂದರೆ ಯಾರೇ ತೊಂದರೆಯಲ್ಲಿದ್ದೇವೆ ಎಂದು ಹೇಳಿದರೆ, ಸಹಾಯಬೇಕು ಎಂದು ಕೇಳಿದರೆ ದಾನ ಮಾಡದೆ, ಹಣ ಕೊಡದೆ ವಾಪಸ್ಸು ಕಳುಹಿಸಿದಂಥ ಉದಾಹರಣೆಗಳು ಇಲ್ಲ. ಅವರು ಅಷ್ಟೊಂದು ಉದಾರ ದಾನಿಗಳಾಗಿದ್ದರು. ಸನ್ಮಾನ್ಯ ಸಭಾನಾಯಕರು ಹೇಳಿದಂತೆ ಪರಿಷಿಷ್ಟ ವರ್ಗದ ಜನರ ಅಭಿವೃದ್ಧಿಗೋಸ್ಕರ ಅಹೋರಾತ್ರಿದುಡಿದಂಥ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಒಬ್ಬ ಸದನದ ಸದಸ್ಯರು ಸದನ ನಡೆಯುವಂಥ ಸಂದರ್ಭದಲ್ಲಿ ನಿಧನರಾಗಿದ್ದಾರೆ. ಈ ಸಂದರ್ಭದಲ್ಲಿ, ಬಹುಶಃ ಅಧ್ಯಕ್ಷರು ಈಗಾಗಲೇ ತೀರ್ಮಾನ ತೆಗೆದುಕೊಂಡಿರಬಹುದು. ಎಲ್ಲಾ ಕಾರ್ಯಕಲಾಪಗಳನ್ನು ನಾಳೆಗೆ ಮುಂದೂಡತಕ್ಕಂಥ ಪದ್ಧತಿ ಹಿಂದಿನಿಂದ ನಡೆದುಕೊಂಡುಬಂದಿದೆ. ಅದನ್ನು ಮಾಡುತ್ತಾರೆ ಎಂದು ಭಾವಿಸಿ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಮತ್ತು ಅವರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುಬಂಥ ಶಕ್ತಿಯನ್ನು ಭಗವಂತನು ಅವರ ಕುಟುಂಬದವರಿಗೆ ಕೊಡಲಿ ಎಂದುಹೇಳಿ, ಈ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಸೂಚಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೇ, ಇದು ಅತ್ಯಂತ ನೋವಿನ ಪ್ರಸಂಗ. ನಾನು ಮತ್ತು ಜಯಪ್ರಕಾಶ್ ನಾರಾಯಣರವರು ಅತ್ಯಂತ ಸ್ನೇಹಿತರು. 1987 ರಲ್ಲಿ ನಾವು ಅಲ್ಲಿ ಕುಳಿತುಕೊಳ್ಳುತ್ತಿದ್ದೆವು. ಆಗ ಶ್ರೀಮಾನ್ ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದರು. ಅನೇಕ ಬಾರಿ ಅವರು ಹೇಳಿದ ಮಾತು ಸತ್ಯ. ಹರಿಜನ ಗಿರಿಜನರ ಬಗ್ಗೆ, ದೀನದಲಿತರ ಬಗ್ಗೆ ಸಂಪೂರ್ಣವಾಗಿ ಇಡೀ ಶಾಸನ ಸಭೆಯ ಕಾರ್ಯ ಕಲಾಪದಲ್ಲಿ ಅವರು ತಮ್ಮ ಎಲ್ಲಾ ಸಮಯವನ್ನು ಉಪಯೋಗಿಸುತ್ತಿದ್ದರು. ಸನ್ಮಾನ್ಯ ಸಭಾನಾಯಕರು ಹೇಳಿದ್ದು ನಿಜ. ಅದನ್ನು ನಾನೂ ಜ್ಞಾಪಿಸಿಕೊಳ್ಳುತ್ತೇನೆ. ನಿಮಗೆ ಈ 18 ಪರ್ಸೆಂಟ್ ಬಿಟ್ಟರೆ ಬೇರೆ ಯಾವುದೂ ಇಲ್ಲವೇ ಎಂದು ಅವರನ್ನು ಹಾಸ್ಯ ಮಾಡತಕ್ಕಂಥಾದ್ದು ಒಂದು. ಮತ್ತೊಂದು ಎಂದರೆ, ನಾನು, ನಂಜೇಗೌಡರು, ಪುಟ್ಟದಾಸ್‌ರವರು ಮತ್ತು ಬಂಗಾರಪ್ಪನವರು ಮತ್ತು ಜಯಪ್ರಕಾಶ್ ನಾರಾಯಣರವರು ಎಲ್ಲಾ ಒಟ್ಟಿಗೆ ಕುಳಿತುಕೊಳ್ಳುತ್ತಿದ್ದೆವು. ಮಧ್ಯ ಕಡೂರು ತಮ್ಮಯ್ಯನವರು ಶಾಸಕರಾಗಿದ್ದರು. ಕನ್ನಡದ ಬಗ್ಗೆ, ಕರ್ನಾಟಕದ ಬಗ್ಗೆ ನನ್ನದು ಇದ್ದೇ ಇದೆ. ನಂಜೇಗೌಡರು ನೀರಾವರಿ ಇಲಾಖೆ ಬಗ್ಗೆ ಹಗಲೂ ರಾತ್ರಿ ಅವರದೇ ಆದಂಥ ವಿಚಾರಗಳನ್ನು ಹೇಳುತ್ತಿದ್ದರು. ಶ್ರೀಮಾನ್ ಪುಟ್ಟದಾಸ್‌ರವರ ಆರೋಗ್ಯ ಇಲಾಖೆ ಬಗ್ಗೆ ಬಹಳ ಸಮರ್ಥವಾಗಿ ಮಾತನಾಡುತ್ತಿದ್ದರು.

ಬಂಗಾರಪ್ಪನವರದು ಸಮಾಜವಾದಿ ಸಿದ್ಧಾಂತ, ಅವರು ಅದರ ಬಗ್ಗೆ ಮಾತನಾಡುತ್ತಿದ್ದರು. ಜಯಪ್ರಕಾಶ್ ನಾರಾಯಣ್‌ರವರು ಹರಿಜನ, ಗಿರಿಜನ, ಹಿಂದುಳಿದವರ ಬಗ್ಗೆ ಬಿಟ್ಟರೆ ಒಂದು ಅಕ್ಷರ ಅತ್ತಇತ್ತ ಹೋಗುತ್ತಿರಲಿಲ್ಲ. ಈ ನಾಲ್ಕೈದು ಜನರ ಮಧ್ಯ ತಮ್ಮಯ್ಯನವರು ಸಿಕ್ಕಿ ಅಧ್ಯಕ್ಷರನ್ನು ಮೊರೆ ಹೋಗಿ, ಸ್ವಾಮಿ ನನಗೆ ಪೀಠ ಬದಲಾವಣೆ ಮಾಡಿಕೊಡಿ, ಇಲ್ಲಿ ಇವರ ಕಷ್ಟ ತಡೆಯುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದರು. ಜಯಪ್ರಕಾಶ್‌ರವರು ಮಾತೆತ್ತಿದರೆ ಹರಿಜನ ಗಿರಿಜನ ಎಂದು ಶುರು ಮಾಡುತ್ತಾರೆ, ವಾಟಾಳ್ ನಾಗರಾಜ್‌ರವರು ಕನ್ನಡ ಎಂದು ಶುರು ಮಾಡುತ್ತಾರೆ, ನಂಜೇಗೌಡರು ನೀರಾವರಿ ಎಂದು ಶುರು ಮಾಡುತ್ತಾರೆ, ಬಂಗಾರಪ್ಪನವರು ಸಮಾಜವಾದ

ಎಂದು ಹೇಳುತ್ತಾರೆ, ಪುಟ್ಟದಾಸ್‌ರವರು ಆರೋಗ್ಯ ಇಲಾಖೆ ಬಗ್ಗೆ ಪ್ರಾರಂಭ ಮಾಡುತ್ತಾರೆ ಎಂದು ಹಾಸ್ಯದ ಹೊನಲನ್ನು ಹರಿಸುತ್ತಿದ್ದರು. ಜಯಪ್ರಕಾಶ್ ನಾರಾಯಣ್‌ರಂಥ ಒಳ್ಳೆಯ ಮೇಧಾವಿಯನ್ನು ನೆನೆಸಿಕೊಳ್ಳುತ್ತೇನೆ. ಜಯಪ್ರಕಾಶ್ ನಾರಾಯಣ್‌ರವರು ಬಹಳ ಉತ್ಸಾಹದಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಈ ಸಾರಿ ಅವರು ಗೆದ್ದು ಬಂದಾಗ ಅವರನ್ನು ನೋಡಿದೆ, ಆ ಮೊದಲಿನ ಉತ್ಸಾಹ ಇರಲಿಲ್ಲ, ಬಹಳ ಸೊರಗಿಹೋಗಿದ್ದರು.

ಉತ್ಸಾಹ ಎಂದರೆ ಬಹಳ. ಅತ್ಯಂತ ಹೆಚ್ಚಿನ ರೀತಿಯಲ್ಲಿ ಇತ್ತು. ಈ ಸುದ್ದಿಯಿಂದ ನಿಜವಾಗಲೂ ನಮಗೆ ಬಹಳ ನೋವಾಗಿದೆ. ಬೆಳಿಗ್ಗೆ ಸುದ್ದಿ ತಿಳಿದ ನಂತರ ನನಗೆ ದಿಗ್ಭ್ರಮೆಯಾಯಿತು. ಸದನವನ್ನು ಮುಂದೂಡುತ್ತಾ ಇದೆ, ಸದಸ್ಯರಾದ ಜಯಪ್ರಕಾಶ್ ನಾರಾಯಣ್‌ನವರು ನಿಧನರಾಗಿದ್ದಾರೆ, ಜೆ.ಪಿ., ಜೆ.ಪಿ. ಅಂತ ಹೇಳಿ ನಾವು ಹಾಸ್ಯವಾಗಿ ಅವರನ್ನು ಕರೆಯುತ್ತಾ ಇದ್ದೆವು. ಅವರದು ಒಳ್ಳೆಯ ವ್ಯಕ್ತಿತ್ವ, ಒಳ್ಳೆಯ ಸ್ನೇಹ. ನಾನು ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ಶಾಂತಿ ಕೋರಿ, ಸರ್ಕಾರಕ್ಕೆ ಒಂದು ಸಲಹೆ ನಾನು ಮಾಡುತ್ತೇನೆ. ಅವರು ಅತ್ಯಂತ ಕಷ್ಟದಲ್ಲಿ ಇದ್ದರು. ಆದುದರಿಂದ ಅವರ ಸಂಸಾರಕ್ಕೆ ಕನಿಷ್ಟ ಐದು ಲಕ್ಷ ರೂಪಾಯಿಗಳನ್ನು ಕೊಡಿ ಎಂದು ನಾನು ಹೇಳುತ್ತೇನೆ. ನನ್ನ ವೈಯಕ್ತಿಕವಾಗಿ ನಾನು ಹೇಳುತ್ತೇನೆ, ಕೊಡುವುದು ಬಿಡುವುದು ನಿಮಗೆ ಸೇರಿದ್ದು. ಅವರ ಪರಿಸ್ಥಿತಿ ನನಗೆ ಗೊತ್ತಿದೆ, ಅವರ ಪರಿಸ್ಥಿತಿಯನ್ನು ನೋಡಿದ್ದೇನೆ. ಏನು ಪರಿಸ್ಥಿತಿ ಆಗುತ್ತದೆ ಎನ್ನುವ ಪ್ರಶ್ನೆ ಬೇಡ, ಕೊಡುವುದು ಬಿಡುವುದು ನಿಮಗೆ ಸೇರಿದ್ದು. ನನ್ನ ವೈಯಕ್ತಿಕವಾಗಿ, ಪ್ರಮಾಣಿಕವಾಗಿ ಆ ಮಾತನ್ನು ಹೇಳಬೇಕಾಗಿದೆ. ಅದನ್ನು ನಾನು ಹೇಳುತ್ತಾ ಇದ್ದೇನೆ. ಅದು ನಿಮಗೆ ಸೇರಿದ್ದು. ಏನು ಬೇಕಾದರೂ ಮಾಡಿ. ಏಕೆಂದರೆ ಮುಂದೆ ಅವರ ಹೆಂಡತಿ, ಮಕ್ಕಳ ಜೀವನ ಬೀದಿಗೆ ಹೋಗುವಂತಹ ಪರಿಸ್ಥಿತಿ ಆಗಬಾರದು ಎನ್ನುವುದು ನನ್ನ ಅತ್ಯಂತ ಪ್ರಮಾಣಿಕವಾದಂತಹ ಚಿಂತನೆ. ಇದನ್ನು ಯಾರು ಬೇರೆ ಅರ್ಥಮಾಡಿಕೊಳ್ಳುವಂಥದ್ದು, ಕಲ್ಪನೆ ಮಾಡಿಕೊಳ್ಳುವಂಥದ್ದು ಆಗಬಾರದು. ಆದುದರಿಂದ ನಾನು ಪ್ರಮಾಣಿಕವಾಗಿ ಹೇಳುತ್ತಾ ಇದ್ದೇನೆ. ಇದರ ಜೊತೆಗೆ ಸಕಲ ಸರ್ಕಾರಿ ಗೌರವಗಳೊಡನೆ ಅವರ ಶವ ಸಂಸ್ಕಾರವನ್ನು ನಡೆಸಬೇಕು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳಿ, ತಾವು ತಂದಿರತಕ್ಕಂತಹ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವೈ. ರಾಮಕೃಷ್ಣ (ಅನೇಕಲ್) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಬಹಳ ದುಃಖದ ಸನ್ನಿವೇಶ, ಅದರಲ್ಲೂ ಹರಿಜನ ಸಮಾಜಕ್ಕೆ ಆಗಿರತಕ್ಕಂತಹ ನಷ್ಟ ತುಂಬಲಿಕ್ಕೆ ಆಗುವುದಿಲ್ಲ. ಶ್ರೀ ಜಯಪ್ರಕಾಶ್ ನಾರಾಯಣ್‌ರವರು ಮುಟ್ಟದೆ ಇದ್ದಂತಹ ಸಂಸ್ಥೆ ಯಾವುದೂ ಇಲ್ಲ. ಇಂಜಿನಿಯರಿಂಗ್ ಕಾಲೇಜು ಇರಬಹುದು, ಮೆಡಿಕಲ್ ಕಾಲೇಜ್ ಇರಬಹುದು ಆರ್ಟ್ಸ್ ಕಾಲೇಜು ಇರಬಹುದು. ವಿದ್ಯಾಭ್ಯಾಸಕ್ಕೆ ಅದರಲ್ಲೂ ಹರಿಜನರ ವಿದ್ಯಾಭ್ಯಾಸಕ್ಕೆ ಬಹುಶಃ ತಮ್ಮ ತನು ಮನ ಧನ ಎಲ್ಲವನ್ನೂ ಕೂಡ ಧಾರೆ ಎರೆದಿದ್ದಾರೆ ಎಂದರೆ ತಪ್ಪಾಗುವುದಿಲ್ಲ. ಇದೇ ಕೆಲಸಕ್ಕಾಗಿ ಈ ಸಂಸ್ಥೆಗಳನ್ನು ಕಟ್ಟುವುದು, ಅವುಗಳ ಯೋಗಕ್ಷೇಮ ನೋಡುವುದು ಇದರಲ್ಲೇ ತಮ್ಮ ಆರೋಗ್ಯವನ್ನು ಕಳೆದುಕೊಂಡರು. ನಾನು ಅನೇಕ ಸಲ ಹೇಳುತ್ತಾ ಇದ್ದೆ. ಆರೋಗ್ಯದ ಬಗ್ಗೆ ಗಮನಕೊಡಿ ಎಂದು ಅನೇಕ ಸಾರಿ ಹೇಳುತ್ತಿದ್ದೆ. ಏನು ಆಗುವುದಿಲ್ಲ ಬಿಡಿ ಎಂದು ಹೇಳುತ್ತಿದ್ದರು. ಸ್ವತಃ ಅವರ ಆರೋಗ್ಯವನ್ನು ಹಾಳು ಮಾಡಿಕೊಂಡರು. ಮಾನ್ಯ ಅಧ್ಯಕ್ಷರೇ, ಕಳೆದ ವಾರ ಇದೇ ಸದನಕ್ಕೆ ಅವರು ಎರಡು ಮೂರು ಪ್ರಶ್ನೆಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ಬಹುಶಃ ಆ ಪ್ರಶ್ನೆಗಳನ್ನು ನೋಡಿದಾಗ ನನಗನ್ನಿಸುತ್ತದೆ, ಇಂತಹ ಅಪರೂಪದ ವ್ಯಕ್ತಿ ಸಿಕ್ಕುವುದು ದುರ್ಲಭ ಎಂದು. ಅವರ ಆರೋಗ್ಯವನ್ನೂ ಲೆಕ್ಕಿಸದೇ ತನ್ನ ಸಮಾಜದ

ಏಳಿಗೆಗಾಗಿ ದುಡಿಯುತ್ತಿದ್ದಂಥವರಲ್ಲಿ ಇವರು ಅಗ್ರಗಣ್ಯರು ಮತ್ತು ಮೊದಲಿಗರು ಎಂದು ಹೇಳಿದರೆ ತಪ್ಪಾಗಲಾರದು. ನಾವು ನಿಜವಾಗಲೂ ಕೂಡ ಇವತ್ತು ಒಬ್ಬ ಯೋಧನನ್ನು ಸಮಾಜ ಕಳೆದುಕೊಂಡಿದ್ದೇವೆ. ಭಗವಂತ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೊಡಲಿ ಎಂದು ಕೇಳಿಕೊಂಡು ತಮಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

+ ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ತಾವು ಮಂಡಿಸಿರತಕ್ಕಂತಹ ನಿರ್ಣಯಕ್ಕೆ ನಾನೂ ಧ್ವನಿಗೂಡಿಸುವುದಕ್ಕೆ ಇಚ್ಛಿಪಡುತ್ತೇನೆ. ಈಗಾಗಲೇ ಸಭಾ ನಾಯಕರು ಅವರು ಮಾಡಿರತಕ್ಕಂತಹ ಸೇವೆಗಳ ಬಗ್ಗೆ ಮುಕ್ತಕಂಠದಿಂದ ಹೊಗಳಿಕೆಯ ಮಾತುಗಳನ್ನು ಆಡಿದ್ದಾರೆ. ಅವರು ನಾಲ್ಕು, ಐದನೇ ವಿಧಾನಸಭೆಯಲ್ಲಿ ಸದಸ್ಯರಾಗಿದ್ದರು. ಆಗ ಅವರು ನನಗೆ ಹೆಚ್ಚು ಪರಿಚಯ ಇರಲಿಲ್ಲ. ಆರನೇ ವಿಧಾನಸಭೆಯಲ್ಲಿ ನಾನು ಇರತಕ್ಕಂತಹ ಸಂದರ್ಭದಲ್ಲಿ ಅವರು ಯಾವಾಗಲೂ ಕೂಡ ಬಹಳ ಹತ್ತಿರದಿಂದ ನನ್ನನ್ನು ಕಾಣುತ್ತಾ ಇದ್ದರು, ನಮ್ಮ ಜೊತೆ ಬರುತ್ತಾ ಇದ್ದರು. ನಾನು ಇಲ್ಲಿ ಕುಳಿತಿರುವಾಗ ಶ್ರೀ ಸಿ.ಎಂ. ಆರ್ಮುಗಂರವರು ಕೂಡ ಆರನೇ ವಿಧಾನಸಭೆಯ ಸದಸ್ಯರಾಗಿದ್ದರು. ಆಗ ನಮ್ಮ ಹತ್ತಿರ ವಿಚಾರಗಳನ್ನು ಮಾಡಿ ಹರಿಜನ ಗಿರಿಜನರಿಗೆ ಶಾಶ್ವತವಾಗಿ ಸಹಾಯ ಆಗುವಂಥ ವಿದ್ಯಾಸಂಸ್ಥೆಗಳನ್ನು ಮಾಡಬೇಕು ಎನ್ನತಕ್ಕಂಥ ಸಂಕಲ್ಪವನ್ನು ಏನು ಇಟ್ಟುಕೊಂಡಿದ್ದರು, ಈಗ ಬಹುಶಃ ಅದರ ವಿಚರಣೆಯನ್ನು ಕೊಡುತ್ತಾ ಹೋದರೆ ಗಂಟೆಗಟ್ಟಲೆ ಕೊಡಬೇಕಾಗುತ್ತದೆ. ಅವರು ಬಹಳ ಕಾಳಜಿಯನ್ನು ವಹಿಸುತ್ತಾ ಇದ್ದರು, ಅಂದಿನ ಮುಖ್ಯ ಮಂತ್ರಿಗಳಾಗಿದ್ದಂತಹ ದಿವಂಗತ ಶ್ರೀ ಆರ್. ಗುಂಡುರಾವ್‌ರವರಿಗೆ ಬಹಳ ಹತ್ತಿರವಾಗಿ ಇದ್ದವರು ಎನ್ನುವ ಕಾರಣದಿಂದಾಗಿ ನಮ್ಮ ಹತ್ತಿರ ಬಂದು ನಮ್ಮ ಮನಸ್ಸನ್ನು ಒಲಿಸತಕ್ಕಂತಹ, ಗುಂಡುರಾವ್ ಅವರ ಹತ್ತಿರ ಇದ್ದಂಥ ಎಲ್ಲ ಶಾಸಕರನ್ನೂ ಕೂಡ ಮನಸ್ಸು ಒಲಿಸಿ ಅವರ ಹತ್ತಿರ ಕರೆದುಕೊಂಡು ಇವತ್ತು ಅಂಬೇಡ್ಕರ್‌ರವರ ಹೆಸರಿನಲ್ಲಿ ಒಂದು ಕೆಲಸ ಆಗಬೇಕು ಎನ್ನತಕ್ಕಂತಹ ತೀರ್ಮಾನ ಮಾಡಿಸುವ ಮಟ್ಟಕ್ಕೆ ನಮ್ಮ ಮೇಲೆ ಒತ್ತಾಯ ತರುತ್ತಾ ಇದ್ದರು.

ಆದರೆ ಬಂದು ನಮ್ಮನ್ನು ಕೇಳುತ್ತಾ ಇದ್ದಂತಹ ರೀತಿ ನೀತಿ, ಮತ್ತು ನಮಗೆ ಪ್ರೋತ್ಸಾಹ ಕೊಡತಕ್ಕಂಥ ಮತ್ತು ನಮ್ಮನ್ನು ಅನುಸರಿಸುತ್ತಾ ಇರತಕ್ಕಂಥ ಮಾರ್ಗವನ್ನು ನೋಡಿದಾಗ ನಿಜವಾಗಲೂ ಕೂಡ ಸಂತೋಷವಾಗುತ್ತದೆ. ಅಂದು ಅವರು ಮಾಜಿ ಶಾಸಕರು ಆಗಿದ್ದರು. ಅದರಲ್ಲಿ ಕೂಡ ಅವರು ಸಮಾಜದ ಬಗ್ಗೆ ಹೊಂದಿದ್ದು ಕಳಕಳಿ ಎಷ್ಟು ಎಂದು ಹೇಳುವುದಕ್ಕೆ ಆಗದೇ ಇರತಕ್ಕಂಥ ಮಟ್ಟಕ್ಕೆ ಅವರು ಕೆಲಸವನ್ನು ಮಾಡಿದ್ದರು. ನಾನು ಈ ಸಂದರ್ಭದಲ್ಲಿ ಒಂದು ಸಲಹೆ ಕೊಡತಕ್ಕಂಥದ್ದು ಯಾರೇ ಆಗಲಿ ರಾಜಕೀಯ ಜೀವನದಲ್ಲಿ ಮಾಡಿರತಕ್ಕ ಸೇವೆಗೂ ಇವರು ಮಾಡಿರತಕ್ಕಂತಹ ಸೇವೆಗಳನ್ನೂ ನೋಡಿದಾಗ ಬಹಳಷ್ಟು ಅಂತರವನ್ನು ಕಾಣುವುದಕ್ಕೆ ಸಾಧ್ಯ. ಇವತ್ತು ಸಮಾಜಕ್ಕೆ ಶಾಶ್ವತವಾದಂತಹ ಕೆಲಸಗಳನ್ನು ಮಾಡಿದ್ದಾರೆ.

ಅದಕ್ಕೆ ಅವರು ಅನುಸರಿಸತಕ್ಕ ಮಾರ್ಗ ಏನಿದೆ ಮತ್ತು ಅವರು ನಡೆದುಕೊಂಡ ದಾರಿ ಏನಿದೆ ಅವರ ದಾರಿಯಲ್ಲಿ ನಾವು ಹೋಗಬೇಕು ಎನ್ನುವ ಮಟ್ಟಕ್ಕೆ ಅವರು ನಡೆದುಕೊಂಡಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಅವರ ಹೆಸರು ಶಾಶ್ವತವಾಗಿ ಈ ರಾಜ್ಯದಲ್ಲಿ ಉಳಿಯಬೇಕು, ಒಂದು ತೀರ್ಮಾನವನ್ನು ಮಾಡತಕ್ಕಂಥದ್ದನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಬೇಡೋಣ. ಅವರ ಹೆಸರು ಶಾಶ್ವತವಾಗಿ ಉಳಿಯುವ ದೃಷ್ಟಿಯಲ್ಲಿ ಯಾವುದಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇನ್ನು ವೈಯಕ್ತಿಕವಾಗಿ ಅವರ ಸಂಸಾರದ ಬಗ್ಗೆ ಕೂಡ ನಾನು ಬಲ್ಲೆ. ಇವತ್ತು ತಮ್ಮ ಮುಖಾಂತರ ಒಂದು ಸಲಹೆಯನ್ನು ಕೊಡುತ್ತೇನೆ. ಇವತ್ತು ಅವರ ಕುಟುಂಬದ ಪರಿಸ್ಥಿತಿ ಏನು ಇದೆ, ಅವರ ಮಕ್ಕಳು ಯಾವ ತರಹದ ಪರಿಸ್ಥಿತಿಯಲ್ಲಿ ಇದ್ದಾರೆ

ಎಂದು ಅವರನ್ನೇ ಕರೆದು ಅವರ ಬಗ್ಗೆ ವಿಚಾರಮಾಡಿ, ಚಿಂತನೆ ಮಾಡಿ, ಯಾವ ರೀತಿಯಾದಂತಹ ಸಹಾಯ ಮಾಡಬಹುದು ಎನ್ನತಕ್ಕಂಥದರ ಬಗ್ಗೆ ಚಿಂತನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ಇವತ್ತು ಅವರ ಆಗಲಿಕೆಯಿಂದ ನಮಗೂ ಕೂಡ ತುಂಬಲಾದಷ್ಟು ನೋವು ಆಗಿದೆ ಎನ್ನತಕ್ಕಂತಹ ಮಾತನ್ನು ಹೇಳಿ ತಾವು ತಂದಿರತಕ್ಕ ನಿರ್ಣಯಕ್ಕೆ ನಾನು ಕೂಡ ಧ್ವನಿಗೂಡಿಸುವುದರ ಜೊತೆಗೆ ಇವತ್ತು ಅವರ ಆಗಲಿಕೆಯಿಂದ ಆಗಿರತಕ್ಕಂತಹ ನೋವು ಏನು ಇದೆ ಆ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ದಯಾಮಯನಾದ ಪರಮಾತ್ಮನು ಅವರ ಕುಟುಂಬಕ್ಕೆ ಕೊಡಲಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

+ ಶ್ರೀ ವಿ.ಎಸ್. ಕೌಜಲಗಿ (ಅರಭಾವಿ) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಸದನಕ್ಕೆ ಬಂದ ನಂತರ ಜೆ.ಪಿ. ನಾರಾಯಣ್‌ರವರ ನಿಧನದ ವಾರ್ತೆಯನ್ನು ಕೇಳಿ ನಿಜವಾಗಲೂ ಮನಸ್ಸಿಗೆ ಬಹಳ ನೋವಾಯಿತು. ಅವರಲ್ಲಿದ್ದಂತಹ ಒಂದು ಗುಣವನ್ನು ನಾನು ಕಂಡಿದ್ದೆ. ಅಂದರೆ ಹರಿಜನರ ಉದ್ಧಾರವಾಗಲಿಕ್ಕೆ ಕೇವಲ ನಾವು ಶಾಸನಗಳನ್ನು ರಚನೆ ಮಾಡಿ ಅವುಗಳನ್ನು ಕಾರ್ಯರೂಪದಲ್ಲಿ ತರುವುದರಲ್ಲಿ ವಿಳಂಬವಾಗುವುದರಿಂದ ಅವರ ಏಳಿಗೆ ಆಗುವುದಿಲ್ಲ, ಅವರಿಗೆ ವಿದ್ಯೆಯೇ ಬಾಳಿನ ಬೆಳಕು ಎನ್ನುವ ಮಾರ್ಗವನ್ನು ತೋರಿಸುವ ಸಲುವಾಗಿ ಸಂಘಸಂಸ್ಥೆಗಳನ್ನು ನಿರ್ಮಾಣಮಾಡಿ ಅವರಲ್ಲಿರತಕ್ಕಂತಹ ಅಜ್ಞಾತವನ್ನು ಹೋಗಲಾಡಿಸಿ ಅವರನ್ನು ಮುಂದಕ್ಕೆ ತರಬೇಕು ಅನ್ನುವುದರಲ್ಲಿ ಬಹಳ ಪ್ರಯತ್ನ ಮಾಡಿ ಮತ್ತು ದಿಟ್ಟ ಮಾತನ್ನು ನನಗೆ ಎಷ್ಟೊ ಸಲ ಹೇಳುತ್ತಾ ಇದ್ದರು. ಕೌಜಲಗಿಯವರೇ ನೀವೆಲ್ಲ ನಮಗೆ ಸಹಾಯ ಮಾಡಬೇಕು ಎನ್ನುವ ಒಂದು ನನ್ನ ಮೇಲೆ ಒತ್ತಡ ತರುತ್ತಿದ್ದರು. ಸರ್ಕಾರದಲ್ಲಿ ಕೆಲಸಗಳನ್ನು ಮಾಡಿಕೊಂಡು ಹೋಗುವ ಸಲುವಾಗಿ ಒತ್ತಡ ತಂದು ಕೆಲಸ ಮಾಡಿಸುವಂಥ ಒಬ್ಬ ಅಭಿಮಾನದ ವ್ಯಕ್ತಿ, ಇವತ್ತು ನಮ್ಮ ಮಧ್ಯೆಯಿಲ್ಲ. ಸುಮಾರು ವರ್ಷಗಳಿಂದ ಅವರ ಸಂಗಡ ನಾನು ಇದ್ದಾಗ ಏನೋ ಅವರು ಅಂಬೇಡ್ಕರ್ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆದು ಉಳಿದವರ ಹಾಗೆ ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದಾಗಿತ್ತು. ಆದರೆ ಆ ರೀತಿ ಮಾಡದೇ ಹರಿಜನರ ಉದ್ಧಾರಕ್ಕಾಗಿ ತಮ್ಮ ಆರೋಗ್ಯವನ್ನೂ ಸಹಿತ ಗಣನೆಗೆ ತೆಗೆದುಕೊಳ್ಳದೇ ಕೆಲಸ ಮಾಡುತ್ತಾ ಇದ್ದರು.

ಈ ಸಲ ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಾಗ ನಾನು ಕೇಳಿದೆ ಏಕೆ ಜೆ.ಪಿ.ಯವರೇ ತಮ್ಮ ಆರೋಗ್ಯ ಇಷ್ಟು ಕೆಟ್ಟಿದೆ ಎಂದು, ಏಕೆಂದರೆ ಬಹಳ ಸದೃಢವಾದ ವ್ಯಕ್ತಿ ಅವರು. ಇಲ್ಲ ಕೌಜಲಗಿಯವರೆ ನನಗೆ ಸ್ವಲ್ಪ ಆರೋಗ್ಯ ಸರಿಯಾಗಿಲ್ಲ ಎಂದು ಚೀಷ್ಟೆ ಮಾಡಿ ಹೇಳುತ್ತಾ ಇದ್ದರು. ಕಳೆದ ನಾಲ್ಕು ಐದು ದಿವಸಗಳ ಹಿಂದೆ ಅವರಿಗೆ ಆಕಸ್ಮಿಕ ಘಟನೆ ಜರುಗಿದ ನಂತರ ಅವರು ಆರೋಗ್ಯವನ್ನು ಪುನಃ ಚೇತರಿಸಿಕೊಳ್ಳಲಿಲ್ಲ. ನಿಜವಾಗಲೂ ನನಗೆ ವೈಯಕ್ತಿಕ ಮತ್ತು ಪಕ್ಷಕ್ಕೂ ಸಹಿತ ಬಹಳ ನೋವಾಗಿದೆ. ಈ ಸಂದರ್ಭದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು, ಶ್ರೀ ಜಯಚಂದ್ರರವರು ಹೇಳಿದ ಹಾಗೆ ಸರ್ಕಾರದವರು ಅವರ ಕುಟುಂಬಕ್ಕೆ ಸ್ವಲ್ಪ ಆರ್ಥಿಕ ನೆರವನ್ನು ನೀಡಬೇಕು ಎನ್ನುವುದನ್ನು ನಾನೂ ಒಪ್ಪುತ್ತೇನೆ ಮತ್ತು ಇವತ್ತು ಅವರ ನಿಧನದಿಂದ ಏನು ಒಂದು ಆಘಾತ ಆಗಿದೆ ಅವರ ಕುಟುಂಬ ಅದನ್ನು ತಡೆದುಕೊಳ್ಳಬೇಕು. ದೇವರು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಹಾರೈಸುತ್ತಾ ಸಭಾ ನಾಯಕರು ತಂದಿರತಕ್ಕಂತಹ ಸೂಚನೆಯನ್ನು ನಾನು ಒಪ್ಪಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೇ, ಬಹಳ ಹಿರಿಯ ಸದಸ್ಯರಾದ ಜಯಪ್ರಕಾಶ್ ನಾರಾಯಣ್‌ರವರು ನಿಧನ ಹೊಂದಿರುವುದಕ್ಕೆ ಬಹಳ ನೋವಾಗಿದೆ. ರಾಜಕಾರಣದಲ್ಲಿ ಪ್ರಾಮಾಣಿಕ, ನೇರ ಮತ್ತು ಸರಳ ಜನರ

ಪರಂಪರೆ ಕಡಿಮೆಯಾಗುತ್ತಾ ಇರತಕ್ಕಂತಹ ಸಂದರ್ಭದಲ್ಲಿ ರಾಜಕಾರಣದಲ್ಲಿ ಮತ್ತು ತಮ್ಮ ವೈಯಕ್ತಿಕ ಜೀವನದಲ್ಲಿ ನೇರ, ಸರಳ ಮತ್ತು ಪ್ರಮಾಣಿಕತೆಯನ್ನೇ ಮೈಗೂಡಿಸಿಕೊಂಡು ಬಂದಂತಹ ಹಿರಿಯ ಸದಸ್ಯರನ್ನು ನಾವು ಇಂದು ಕಳೆದುಕೊಂಡಿರತಕ್ಕಂಥದ್ದು ಬಹಳ ದುಃಖಕರವಾದಂಥ ಸಂಗತಿ.

10.30 ಎ.ಎಂ

ಅವರು ಹಿಂದುಳಿದಿರತಕ್ಕಂತಹ ಮತ್ತು ಸಮಾಜದಲ್ಲಿ ಅತ್ಯಂತ ತುಳಿತಕ್ಕೆ ಒಳಗಾಗಿರತಕ್ಕಂಥ ಜನತೆಗೋಸ್ಕರ ದುಡಿದಂತಹ ಅವರಿಗೆ ನಾನು ಮತ್ತು ನಮ್ಮ ಪಕ್ಷದ ಪರವಾಗಿ ವೈಯಕ್ತಿಕ ಸಂತಾಪವನ್ನು ಸೂಚಿಸಿ, ಅವರ ಕುಟುಂಬ ವರ್ಗದ ಪರಿಸ್ಥಿತಿ ಹೇಗಿದೆ ಎನ್ನತಕ್ಕಂಥದ್ದನ್ನು ಸರ್ಕಾರ ಗಮನಿಸಿ ಅವರಿಗೆ ಸಹಾಯ ನೀಡಬೇಕೆಂದು ಹೇಳಿ ನನ್ನ ಸಂತಾಪವನ್ನು ಸೂಚಿಸುತ್ತೇನೆ.

+ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಸನ್ಮಾನ್ಯ ಉಪಾಧ್ಯಕ್ಷರೆ, ಶ್ರೀ ಜಯಪ್ರಕಾಶ್ ನಾರಾಯಣರವರ ನಿಧನ ನನಗೆ, ಈ ಸದನಕ್ಕೆ ಮತ್ತು ನಮ್ಮ ಪರಿಶಿಷ್ಟ ಜನತೆಯ ಸಮಾಜಕ್ಕೆ ತುಂಬಾ ದುಃಖವನ್ನು ತಂದಿದೆ. ಮೊನ್ನೆ ತಾನೇ ನಾನು ಆಸ್ಪತ್ರೆಗೆ ಹೋಗಿದ್ದೆ. ಆಗ ನನಗೆ ಆಶ್ಚರ್ಯವಾಯಿತು. ಅವರು ಕಾಲೇಜುಗಳಿಗೆ ಸಂಬಂಧಪಟ್ಟಂತಹ ಫೈಲುಗಳನ್ನೆಲ್ಲ ತರಿಸಿ ಆಸ್ಪತ್ರೆಯಲ್ಲಿಯೇ ಅಟೆಂಡ್ ಮಾಡುತ್ತಾ ಇದ್ದರು. ಅವರಿಗೆ ನಾನು ಹೇಳಿದೆ, ಏತಕ್ಕೆ ಸಾರ್ ಈ ಸಮಯದಲ್ಲಿಯೂ ಇಷ್ಟೊಂದು ತೊಂದರೆ ತೆಗೆದುಕೊಳ್ಳುತ್ತಿದ್ದೀರಿ, ಆರಾಮವಾಗಿ ರೆಸ್ಟ್ ತೆಗೆದುಕೊಳ್ಳಿ ಹಾಗೆಂತ ಎಲ್ಲ ಹೇಳಿದೆ. ಆದಾದನಂತರ ಅಲ್ಲೂ ಕೂಡ ಅವರ ಜೊತೆಯಲ್ಲಿ ಕುಳಿತು ಕೆಲವು ಸಂಗತಿಗಳನ್ನು ಸಮಾಜದ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಮತ್ತು ಇನ್ನೂ ಕೆಲವು ವಿಷಯಗಳನ್ನು ಅಲ್ಲಿ ಸುಮಾರು 10 ನಿಮಿಷ ಚರ್ಚೆ ಮಾಡಿದೆ. ಬಹುಶಃ ಈ ಸದನದಲ್ಲಿ ಅವರಿಗೆ ಇದ್ದಂತಹ ವಿಷಯಗಳು, ಅವರ ಮನಸ್ಸಿನಲ್ಲಿ ಇದ್ದಂತಹ ಭಾವನೆಗಳು ನಮ್ಮ ಪರಿಶಿಷ್ಟ ಸಮಾಜಕ್ಕೆ ಮತ್ತು ಎಲ್ಲಾ ವರ್ಗದ ಬಡವರ ಪರವಾಗಿ ಅವರಿಗೆ ಇದ್ದಂತಹ ಕಳಕಳಿಯನ್ನು ಆಧರಿಸಿ ಈ ಇಳಿ ವಯಸ್ಸಿನಲ್ಲಿಯೂ ಕೂಡ ನಮ್ಮ ನಾಯಕರು ಆದ ಮಾನ್ಯ ಮುಖ್ಯಮಂತ್ರಿಯವರು ನಮ್ಮ ಪಕ್ಷದ ಪರಿಶಿಷ್ಟ ಜಾತಿ ವಿಭಾಗದಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದರು. ಈ ಸಂದರ್ಭದಲ್ಲೂ ಕೂಡ ಸಮಾಜದ ಜನರ ಸಂಘಟನೆಗೆ ಅವರ ಅಭಿವೃದ್ಧಿಗೆ ಪ್ರಯತ್ನ ಮಾಡಿದ್ದರು. ಇವತ್ತು ಅವರನ್ನು ಕಳೆದುಕೊಂಡಿರತಕ್ಕಂಥದ್ದು ನಮಗೆ ತುಂಬ ದುಃಖವಾಗಿದೆ. ಅವರ ಸಂಸಾರಕ್ಕೆ ದುಃಖವನ್ನು ಭರಿಸತಕ್ಕಂಥ ಶಕ್ತಿ ಬರಲೆಂದು ಹೇಳಿ ಅವರ ಸಂಸಾರದ ಆಗುಹೋಗುಗಳನ್ನು ನೋಡಿ ದಯಮಾಡಿ ಅವರಿಗೆ ಎಷ್ಟು ಸಹಾಯ ಮಾಡಬೇಕೋ ಅದನ್ನು ಮಾಡಬೇಕೆಂದು ಹೇಳಿ, ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಸನ್ಮಾನ್ಯ ಉಪಾಧ್ಯಕ್ಷರೆ, ಶ್ರೀಯುತ ಜಯಪ್ರಕಾಶ್ ನಾರಾಯಣ್ ಅವರು ಶೋಷಿತ ವರ್ಗದ ಜನರ ಬಗ್ಗೆ ಹೋರಾಟ ಮಾಡಿದ ಬಗ್ಗೆ ಸಾಕಷ್ಟು ಮಂದಿ ಈಗಾಗಲೇ ಹೇಳಿದ್ದಾರೆ. ಅವರು ತಮ್ಮ ಸಹದ್ಯೋಗಿಗಳಾಗಿದ್ದರು. ವಿಧಾನ ಸಭೆಯಲ್ಲಿ ನಾನು ಅವರನ್ನು ಕೆಲವೇ ತಿಂಗಳುಗಳ ಹಿಂದಿನಿಂದ ನೋಡುತ್ತಾ ಇದ್ದೆ. ಅವರು ಬಹಳ ಸೂಕ್ಷ್ಮವಾದ ವಿಚಾರಗಳನ್ನು ಈ ಸದನದ ಮುಂದೆ ಇಡುತ್ತಿದ್ದರು. ದೀನದಲಿತರ ಬಗ್ಗೆ, ಹಿಂದುಳಿದವರ ಬಗ್ಗೆ ಸಾಕಷ್ಟು ಕಾಳಜಿ ವಹಿಸತಕ್ಕಂಥ ಹಾಲಿ ಸದಸ್ಯರಾಗಿದ್ದ ಶ್ರೀ ಜಯಪ್ರಕಾಶ್ ನಾರಾಯಣರವರನ್ನು ನಾವೆಲ್ಲ ಕಳೆದುಕೊಂಡು ಅತ್ಯಂತ ದುಃಖಿತರಾಗಿದ್ದೇವೆ. ನಾನು ನಮ್ಮ ಪಕ್ಷದ ಪರವಾಗಿ

ಅವರಿಗೆ, ಶ್ರದ್ಧಾಂಜಲಿಯನ್ನು ಅರ್ಪಿಸಿ ಸದನದ ನಾಯಕರು ಮಂಡಿಸಿದ ನಿರ್ಣಯಕ್ಕೆ ಸಹಾನುಭೂತಿ ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಬೆಂಬಲ ವ್ಯಕ್ತಪಡಿಸಿ ಅವರಿಗೆ ಚಿರಶಾಂತಿಯನ್ನು ಭಗವಂತ ಕರುಣಿಸಲಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

+ಶ್ರೀ ಹೆಚ್.ಎನ್. ನಂಜೇಗೌಡ (ಬಸವನ ಗುಡಿ) : ಸನ್ಮಾನ್ಯ ಉಪಾಧ್ಯಕ್ಷರೇ, ಜಯಪ್ರಕಾಶ್ ನಾರಾಯಣ್ ರವರು ತೀರಿ ಹೋದರು ಅಂತ ನನಗೆ ನಂಬುವುದಕ್ಕೆ ಆಗಲಿಲ್ಲ. 1967ರಿಂದ ನಾವು ಅವರು ಜೊತೆಯಲ್ಲಿ ಇದ್ದವು. ಅವತ್ತು ಯಾವುದೇ ಪ್ರಶ್ನೆ ಬರಲಿ, ಯಾವುದೇ ಚರ್ಚೆ ಬರಲಿ ಸಭೆಯಲ್ಲಿ ಹರಿಜನ ಗಿರಿಜನರ ಪ್ರಶ್ನೆಯನ್ನು ಸದನದಲ್ಲಿ ತಂದು ಅವರ ಸಮಸ್ಯೆಯನ್ನು ನಮ್ಮ ಸಭೆಯ ಮುಂದೆ ಇಡುತ್ತಿದ್ದರು. ಬಹುಶಃ ಅಂದಿನ ದಿನಗಳಲ್ಲಿ ಹರಿಜನ ಮುಖಂಡರುಗಳು ಸಹ ಹರಿಜನರ ವಿಚಾರಗಳನ್ನು ಮಾತನಾಡುವುದಕ್ಕೆ ಸ್ವಲ್ಪ ಅಂಜಿಕೊಳ್ಳುತ್ತಿದ್ದರು. ಏನೋ ಒಂದು ನಾಚಿಕೆ ಪಡತಕ್ಕಂತಹ ದಿನಗಳು ಆಗ 1962ರಲ್ಲಿ ಏತಕ್ಕೆ ಎಂದು ನನಗೆ ಗೊತ್ತಿಲ್ಲ. ಬಹುಶಃ ಹೊಸ ಮೈಸೂರು ಹಳೇ ಮೈಸೂರು ಗಲಾಟೆಯಾಗಿ ಇನ್ನೂ ಆದರ ಬಿಂಬ ಹಾಗೆಯೇ ಉಳಿದುಕೊಂಡು ಈ ಹರಿಜನ ಗಿರಿಜನರ ಸಮಸ್ಯೆ ಹಿಂದೆ ಆಗಿತ್ತು. ಆದರೆ ಅವರು ಅಂಜಿಕೊಳ್ಳುತ್ತಿರಲಿಲ್ಲ. ಕೆಲವು ಸಾರಿ ಅವರನ್ನು ಸಭೆಯಲ್ಲಿ ತಮಾಷೆ ಮಾಡುತ್ತಿದ್ದೆವು. ಅವರಿಗೆ ಹದಿನೆಂಟು ಪರ್ಸೆಂಟು ಎಂದು ಹೆಸರೇ ಇಟ್ಟು ಬಿಟ್ಟಿದ್ದರು. ಆದರೂ ಕೂಡ ಪ್ರತಿಯೊಂದು ವಿಚಾರದಲ್ಲೂ ಯಾವುದೇ ವಿಷಯ ಬಂದರೂ ಈ ವಿಷಯಕ್ಕೆ ಸಂಬಂದಪಟ್ಟ ಹಾಗೆ ಹರಿಜನ ಗಿರಿಜನರ ಯೋಗಕ್ಷೇಮ ಯಾವ ರೀತಿ ಆಗಬೇಕು ಎನ್ನತಕ್ಕಂತಹ ವಿಚಾರದಲ್ಲಿ ತುಂಬಾ ಆಸ್ಥೆ ವಹಿಸಿ ಮಾಡುತ್ತಿದ್ದರು. ಅವರು ನಿಧನ ಆಗಿರತಕ್ಕಂಥದ್ದು ನಿಜವಾಗಿಯೂ ಆ ವರ್ಗದವರಿಗೆ ತುಂಬಲಾರದಂತಹ ನಷ್ಟ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಸಭಾ ನಾಯಕರು ತಂದಿರತಕ್ಕ ಈ ಸೂಚನೆಯನ್ನು ಬೆಂಬಲಿಸುತ್ತೇನೆ.

ಶ್ರೀ ಬಿ.ಬಿ. ಬಿಮ್ಮನ ಕಟ್ಟಿ (ಬಾದಾಮಿ) : ಸನ್ಮಾನ್ಯ ಉಪಾಧ್ಯಕ್ಷರೇ, ಈ ಸಂತಾಪ ಸೂಚನೆ ನಿರ್ಣಯದ ಮೇಲೆ ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರು ಹಾಗೂ ನನ್ನ ಸಹದ್ಯೋಗಿಗಳು ಕೂಡ ನಮ್ಮನ್ನು ಆಗಲಿರತಕ್ಕಂತಹ ಜಯಪ್ರಕಾಶ್ ನಾರಾಯಣ್ ರವರ ಬಗ್ಗೆ ದುಃಖಿದ ನಾಲ್ಕು ಮಾತುಗಳನ್ನು ಆಡಿದ್ದಾರೆ. ಇವತ್ತು ನಾನಾದರೂ ಕೂಡ ಅವರ ಒಂದು ಸಾಮಾಜಿಕ ಚಟುವಟಿಕೆಗಳನ್ನು ಬಹಳ ಸಮೀಪದಿಂದ ನೋಡಿರತಕ್ಕ ಒಬ್ಬ ವ್ಯಕ್ತಿ. ಅವರು ಶೈಕ್ಷಣಿಕವಾಗಲಿ, ಸಾಮಾಜಿಕವಾಗಲಿ ಅನೇಕ ಕೆಲಸಗಳನ್ನು ಮಾಡಿ ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಕುಟುಂಬಕ್ಕೆ ಆಗಿರತಕ್ಕಂತಹ ಹಾನಿಗಿಂತಲೂ ಅವರು ಯಾರ ಸಲುವಾಗಿ ಧ್ವನಿಯಾಗಿ ಈ ಸದನದಲ್ಲಿ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ಯಾರು ಹರಿಜನ ಗಿರಿಜನರಾಗಲಿ ಬಹುಶಃ ಆ ಜನರಿಗೆ ಏನು ಅವರ ಕೂಗನ್ನು ಸದನದಲ್ಲಿ ಕೂಗಿ ಅವರ ಕಷ್ಟವನ್ನು ಹೇಳತಕ್ಕಂತಹ ಅವಕಾಶವನ್ನು ಮಾಡುತ್ತಿದ್ದರು ಬಹುಶಃ ಆ ಅವಕಾಶದಿಂದ ವಂಚಿತರಾಗಿರತಕ್ಕಂತಹ ಈ ಜನರಿಗೆ ಅಪಾರ ಹಾನಿಯಾಗಿದೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇಷ್ಟು ಹೇಳಿ ಅವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ಮತ್ತು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಈ ಸದನಕ್ಕೆ ಬಂದಂತಹ ಸಂದರ್ಭದಲ್ಲಿ ಕಳೆದ ಮೂರೂವರೆ ತಿಂಗಳ ಕಾಲ ಈ ಸದನದಲ್ಲಿ ನಮ್ಮ ಸಹಪಾಠಿಯಾಗಿ ಕೆಲಸ ಮಾಡಿದಂತಹ ಹಿರಿಯ ರಾಜಕಾರಣಿ

ಸನ್ಮಾನ್ಯ ಜಯಪ್ರಕಾಶ್ ನಾರಾಯಣ್ ರವರು ನಮ್ಮನ್ನು ಬಿಟ್ಟು ಹೋದರು ಎನ್ನುವಂತಹ ಸುದ್ದಿಯನ್ನು ಕೇಳಿದಂತಹ ಸಂದರ್ಭದಲ್ಲಿ ಮನಸ್ಸಿಗೆ ಬಹಳ ನೋವಾಗುತ್ತದೆ. ಸಮಾಜದಲ್ಲಿ ಅದರಲ್ಲೂ ರಾಜಕೀಯದಲ್ಲಿ ಪ್ರಾಮಾಣಿಕ ಮತ್ತು ನಿಷ್ಠೆಯಿಂದ ಕೆಲಸ ಮಾಡುವಂತಹ ಜನರ ಅಭಾವದ ಈ ದಿನಗಳಲ್ಲಿ ಪ್ರಾಮಾಣಿಕವಾಗಿದ್ದು ಸಾವಿರಾರು ವರ್ಷಗಳಿಂದ ಅಜ್ಞಾನ ಅಂಧಕಾರದಲ್ಲಿ ಇದ್ದಂತಹ ಜನರನ್ನು ಬೆಳಕಿಗೆ ತಂದು ಹಸಿದ ಹೊಟ್ಟೆಯಲ್ಲಿ ನರಳುವಂತ ಜನರ ಬಾಳನ್ನು ಬದಲಾವಣೆ ಮಾಡುವ ದಿಶೆಯಲ್ಲಿ ಕೆಲಸ ಮಾಡಿದಂತಹ ಸನ್ಮಾನ್ಯ ಜಯಪ್ರಕಾಶ್ ನಾರಾಯಣ್ ರವರು ಕಣ್ಮರೆಯಾಗಿದ್ದಾರೆ. ಅವರನ್ನು ಕಳೆದುಕೊಂಡಂತಹ ಅವರ ಕುಟುಂಬ ಮತ್ತು ಅವರನ್ನು ಕಳೆದುಕೊಂಡಂತಹ ಅವರ ಪಕ್ಷಕ್ಕೆ ಆ ಧೈರ್ಯವನ್ನು ಪ್ರಕೃತಿ ನೀಡಲೆಂದು ನಾನು ಸಂತಾಪವನ್ನು ಸೂಚಿಸಿ ಅವರ ಕುಟುಂಬದ ಪರಿಸ್ಥಿತಿಯನ್ನು ಅರಿತು ಸರ್ಕಾರ ಅವರ ಕುಟುಂಬ ಅವರ ಕಣ್ಮರೆ ಆದ ಮೇಲೆ ಬೇರೆಯವರ ಮೇಲೆ ಅವಲಂಬಿಸುವ ರೀತಿ ಇರದೆ ತನ್ನ ಕುಟುಂಬದ ಗಂಡನನ್ನು, ತಂದೆಯನ್ನು ಕಳಕೊಂಡಂತವರು ಬೀದಿ ಪಾಲಾಗದೆ ಸ್ವಾವಲಂಬಿಯಾಗಿ ಇರುವಂತೆ ಆಗಲು ಅವಶ್ಯಕತೆ ಇದ್ದರೆ ಶಾಸಕರುಗಳು ಕೂಡ ನಮ್ಮ ಸಂಬಳದಲ್ಲಿ ಕೆಲವು ಭಾಗಗಳನ್ನು ಬೇಕಾದರೆ ಕೊಡುವಂತಹ ಕೆಲಸ ನಾವು ಮಾಡಬೇಕು. ಕಾರಣ ಒಬ್ಬ ಪ್ರಾಮಾಣಿಕ ಸದಸ್ಯರಿಗೆ ನಾವು ಸಲ್ಲಿಸುವ ಗೌರವ ಎಂದು ತಿಳಿದುಕೊಂಡು, ಅವರನ್ನು ಕಳೆದುಕೊಂಡಂತಹ ಕುಟುಂಬಕ್ಕೆ ಪ್ರಕೃತಿ ಧೈರ್ಯವನ್ನು ಶಕ್ತಿಯನ್ನು ಕೊಡಲೆಂದು ಈ ಮನೆಯಲ್ಲಿ ತಂದಂತಹ ನಿರ್ಣಯಕ್ಕೆ ಬೆಂಬಲ ಸಂತಾಪವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಭಾನಾಯಕರು ತಂದಿರುವಂತಹ ಸಂತಾಪ ಸೂಚನೆಯ ನಡವಳಿಕೆಗೆ ನನ್ನ ಬೆಂಬಲ ವ್ಯಕ್ತ ಪಡಿಸಿ, ಇವತ್ತು ನಮ್ಮನ್ನು ಅಗಲಿದಂತಹ ನಮ್ಮ ಸಹಾಪಾಠಿಗಳು ನಮ್ಮ ಶಾಸಕರೂ ಆದ ಸನ್ಮಾನ್ಯ ಜಯಪ್ರಕಾಶ್ ನಾರಾಯಣರವರು ನಿಧನರಾದದ್ದು ಇವತ್ತು ಬೆಳಿಗ್ಗೆ ಬಂದಾಗ ನನಗೆ ಗೊತ್ತಿರಲಿಲ್ಲ. ಆಮೇಲೆ ಕಂದಾಯ ಮಂತ್ರಿಗಳಾದ ಶ್ರೀಮಾನ್ ಜಾಲಪ್ಪನವರು ಹೇಳಿದರು. ಈ ರೀತಿ ಜಯಪ್ರಕಾಶ್ ನಾರಾಯಣವರು ನಿಧನ ಹೊಂದಿದ್ದು ನಮ್ಮ ಮನಸ್ಸಿಗೆ ಬಹಳ ನೋವು ಆಯಿತು. ಏಕೆಂದರೆ ಅವರು ನಮ್ಮ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಪ್ರಮುಖ ರಾಜಕಾರಣಿಯಾಗಿ ನಮ್ಮ ಪಕ್ಷಕ್ಕೆ ಅಪಾರವಾದ ಸೇವೆ ಮಾಡಿದ್ದಾರೆ. ಅವರ ಸೇವೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾದರೆ ಅವರು ಯಾವಾಗಲೂ ಪಕ್ಷದ ಕಛೇರಿಯಲ್ಲಿ ಸಿಗತಕ್ಕ ವ್ಯಕ್ತಿಯಾಗಿದ್ದರು. ಪಕ್ಷದ ಕಛೇರಿಗೆ ಹೋದಾಗ ಅವರನ್ನು ಯಾವಾಗಲೂ ನಾವು ನೋಡುತ್ತಿದ್ದೆವು.

ಅವರು ಯಾವಾಗಲೂ ದಲಿತರ ಬಗ್ಗೆ, ದೀನದಲಿತರ ಬಗ್ಗೆ ಮತ್ತು ಬಡವರ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದಂಥ ವ್ಯಕ್ತಿಗಳಾಗಿದ್ದರು. ಮತ್ತು ಮೇಲಾಗಿ ನಿಷ್ಠಾವಂತರು, ಪ್ರಾಮಾಣಿಕತೆಗೆ ಹೆಸರಾದಂಥ ವ್ಯಕ್ತಿಗಳಾಗಿದ್ದರು. ಅವು ಸಂಘಸಂಸ್ಥೆಗಳನ್ನು ಕಟ್ಟಿಕೊಂಡು ಅವರು ಪೂರಕವಾಗಿ ನಮ್ಮ ಉತ್ತರ ಕರ್ನಾಟಕದ ಭಾಗದಿಂದ ಬಂದಂಥ ವ್ಯಕ್ತಿಗಳಾಗಿದ್ದರು; ಸಿರ್ಸಿಯವರು. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಮೊನ್ನೆ ಕೂಡ ನಾನು ಅವರನ್ನು ಹೊರಗಡೆ ಹುಡುಕುತ್ತಾ ಇದ್ದೆ ಆಗ ಅವರಿಗೆ ಹಾರ್ಟ್ ಅಟ್ಯಾಕ್ ಆಗಿತ್ತು. ನಾನು ಕೂಡ ಹೋದೆ. ಡಾಕ್ಟರು ಬಂದಿದ್ದರು. ಡಿ.ಐ.ಜಿ. ಸಾಹೇಬರೇನೋ ಬಂದಿದ್ದರು. ಅವರನ್ನು ನೋಡುತ್ತಿದ್ದರು, ಇವತ್ತು ಕೂಡ ಈ ಘಟನೆ ನೋಡಿ ನಮ್ಮ ಮನಸ್ಸಿಗೆ ಬೇಜಾರಾಗಿದೆ. ಎಲ್ಲ ಶಾಸಕರು ಕೂಡ ದುಃಖಿದಲ್ಲಿ ಮುಳುಗಿದ್ದೇವೆ. ಒಬ್ಬ ನಿಷ್ಠಾವಂತ ಶಾಸಕನನ್ನು ನಾವು ಕಳೆದುಕೊಂಡಿದ್ದೇವೆ ಎಂಬ ಭಾವನೆಯನ್ನು ಇವತ್ತು ವ್ಯಕ್ತಪಡಿಸಿ ಅವರ ಕುಟುಂಬದವರಿಗೆ ದುಃಖವನ್ನು ಬರಿಸುವ

ಶಕ್ತಿಯನ್ನು ಮತ್ತು ಅವರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತ ನೀಡಲಿ ಎಂದು ಹಾರೈಸಿ ತಾವು ನನಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) : ಮಾನ್ಯ ಸಭಾನಾಯಕರು ತಂದಿರತಕ್ಕ ಈ ನಿರ್ಣಯವನ್ನು ನಾನು ಕೂಡ ಅನುಮೋದಿಸುತ್ತಾ ಇತ್ತೀಚೆಗೆ ನಮ್ಮ ಪಕ್ಷದಲ್ಲಿ ಅವರು ಪರಿಶಿಷ್ಟ ವಿಭಾಗದ ಅಧ್ಯಕ್ಷರಾಗಿದ್ದರು. ನಾನು ಕೂಡ ಹಿಂದುಳಿದ ವಿಭಾಗದ ಅಧ್ಯಕ್ಷನಾಗಿ, ಮಾನ್ಯ ಮಂತ್ರಿಗಳಾದ ಶ್ರೀ ನಿಂಗಯ್ಯನವರು ಯುವಜನ ದಳದ ಅಧ್ಯಕ್ಷರಾಗಿ ಮತ್ತು ಮಹಿಳಾ ವಿಭಾಗದ ಅಧ್ಯಕ್ಷರು ಇವರೆಲ್ಲರೂ ಕೂಡ ಇಡೀ ಕರ್ನಾಟಕ ರಾಜ್ಯದ್ಯಾಂತ ಚುನಾವಣ ಪೂರ್ವದಲ್ಲಿ ನಮ್ಮ ಪಕ್ಷದ ಸಂಘಟನೆಯನ್ನು ನಡೆಸತಕ್ಕ ಸಂದರ್ಭದಲ್ಲಿ ನಾವು ಜಯಪ್ರಕಾಶ್‌ನಾರಾಯಣ ಅವರನ್ನು ಅತ್ಯಂತ ಹತ್ತಿರದಿಂದ ನೋಡಿದ್ದೇವೆ. ಬಹಳ ಅತ್ಯಂತ ಸರಳ ವ್ಯಕ್ತಿಗಳಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರೂ ಕೂಡ ಆಗಿದ್ದರು. ಯಾವಾಗಲೂ ಕೂಡ ದೀನದಲಿತರ ಬಗ್ಗೆ ಮತ್ತು ಬಡವರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸತಕ್ಕ ಮಾತನ್ನು ಯಾವಾಗಲೂ ಕೂಡ ಹೇಳುತ್ತಿದ್ದರು. ಮತ್ತು ಸಮಯಪ್ರಜ್ಞೆ ಅವರಲ್ಲಿತ್ತು. ನಾವೆಲ್ಲಾ ಹುಡುಗರು ಹೋಗುವುದಕ್ಕಿಂತ ಮುಂಚೆ ನೀವೆಲ್ಲಾ ಬೇಗ ಬರಬೇಕು, ಸಮಯವನ್ನು ಕಾಪಾಡಿಕೊಳ್ಳಬೇಕು ಎಂದು ಹೇಳುತ್ತಿದ್ದರು.

ಆ ದೃಷ್ಟಿಯಿಂದ ನಮಗಿಂತ ಮುಂಚೆ ಸಭೆಗೆ ಬರತಕ್ಕಂಥ ಒಂದು ಹಮ್ಮಾಸವನ್ನು ಅವರು ಮಾಡಿಕೊಂಡಿದ್ದರು. ಬಹಳ ಸರಳ ವ್ಯಕ್ತಿಗಳು, ಸಜ್ಜನತೆ ಮತ್ತು ಪ್ರಾಮಾಣಿಕತೆ ಅವರಲ್ಲಿತ್ತು. ಅವರು ಎಲ್ಲರೂ ಕೂಡ ವಿದ್ಯಾವಂತರಾಗಬೇಕು, ನಮ್ಮ ಜನಾಂಗಕ್ಕೆ ನಾವು ಅವರಿಗೆ ಒಂದು ಲಕ್ಷ ರೂಪಾಯಿ ಕೊಟ್ಟರೂ ಕೂಡ ಅವರ ದರಿದ್ರ ಹೋಗುವುದಿಲ್ಲ, ಆದರೆ ಇವರನ್ನು ಸರಿಯಾದ ವಿದ್ಯಾವಂತರನ್ನಾಗಿ ಮಾಡಿದರೆ ಮಾತ್ರ ನಮ್ಮ ಜನಾಂಗದವರು ಉದ್ಧಾರವಾಗುತ್ತಾರೆ ಎನ್ನತಕ್ಕ ಮಾತನ್ನು ಕಳಕಳಿಯಿಂದ ಹೇಳುತ್ತಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ಅವರು ನಮ್ಮೊಡನೆ ಸಮಾಲೋಚನೆ ನಡೆಸುತ್ತಿದ್ದುದು ನೋಡಿ ಜಯಕುಮಾರ್ ಅವರ ಈ ಸಮಾಜ ಉದ್ಧಾರವಾಗಬೇಕಾದರೆ ಅದರಲ್ಲೂ ನಮ್ಮ ಬಡವರು ಉದ್ಧಾರ ಆಗಬೇಕಾದರೆ ಪಾನನಿಷೇಧವನ್ನು ಜಾರಿಗೆ ತರಬೇಕು ಎಂಬುದನ್ನು ಒತ್ತಿ ಒತ್ತಿ ಹೇಳುತ್ತಿದ್ದರು. ಅವರು ಸ್ವತಃ ಪ್ರಾಕ್ಟೀಸ್ ಕೂಡ ಮಾಡಿಕೊಂಡು ಬಂದಿದ್ದರು. ಯಾವುದೇ ರೀತಿ ಡ್ರಿಂಕ್ಸನ್ನು ತೆಗೆದುಕೊಳ್ಳತಕ್ಕ ಅಭ್ಯಾಸ ಅವರಿಗಿರಲಿಲ್ಲ. ಅವರು ಹೇಳುತ್ತಿದ್ದರು ಪಾನನಿಷೇಧ ತಂದಹೊರತೂ ಯಾವುದೇ ಕಾರಣಕ್ಕೂ ಈ ಸಮಾಜ ಉದ್ಧಾರವಾಗುವುದಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಿದ್ದರು. ಅದರಲ್ಲೂ ಕೂಡ ನಾವು ಅತ್ಯಂತ ಗೌರವದಿಂದ ಅವರಿಗೆ ಕೊಡತಕ್ಕ ಶ್ರದ್ಧಾಂಜಲಿ ಏನು ಎಂದರೆ ನಮ್ಮ ರಾಜ್ಯದಲ್ಲಿ, ಮಾನ್ಯ ಸಭಾನಾಯಕರು ಇದರ ಬಗ್ಗೆ ಚಿಂತನೆ ಮಾಡಬೇಕು, ಅವರು ಏನು ಒಂದು ಆಸೆ ಆಕಾಂಕ್ಷೆಯನ್ನು ಇಟ್ಟುಕೊಂಡಿದ್ದರು ಈ ಜನರ ಉದ್ಧಾರಕೋಸ್ಕರ ಪಾನನಿಷೇಧವನ್ನು ತರಬೇಕು ಎಂಬ ವಿಚಾರವನ್ನು ಅವರು ಪದೇಪದೇ ಹೇಳುತ್ತಿದ್ದರು ಅದರ ಕಡೆ ನಮ್ಮ ಸರ್ಕಾರ ಒಂದೇ ಸಲ ಮಾಡುವುದಕ್ಕಾಗದಿದ್ದರು ಹಂತಹಂತವಾಗಿಯಾದರೂ ಕೂಡ ಈ ಪಾನನಿಷೇಧವನ್ನು ಜಾರಿಗೆ ತರುವುದೇ ನಾವು ನಿಜವಾಗಿ ಅವರಿಗೆ ಕೊಡತಕ್ಕ ಶ್ರದ್ಧಾಂಜಲಿ ಎಂದು ನಾನಾದರೂ ಕೂಡ ಭಾವಿಸಿಕೊಂಡಿದ್ದೇನೆ. ಅವರ ಕುಟುಂಬಕ್ಕೆ ಆಗಿರುವ ನಷ್ಟಕ್ಕೆ ಭಗವಂತ ಶಕ್ತಿಯನ್ನು ಕೂಡಲಿ, ಈ ಗಣ್ಯರನ್ನು ಕಳಿದುಕೊಂಡು ಸಮಾಜಕ್ಕಾಗಿರುವ ಈ ತುಂಬಲಾರದ ನಷ್ಟವನ್ನು ಬರಿಸಲಿ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗತಾನೆ ನಾನು ಮೃತರ ನಿವಾಸಕ್ಕೆ ಹೋಗಿ ಅಂತಿಮ ಗೌರವವನ್ನು ಸಲ್ಲಿಸಿ ಬಂದೆ. ಅವರು 1967 ರಲ್ಲಿ ಮೊದಲ ಬಾರಿಗೆ ವಿಧಾನಸಭೆಗೆ ಆರಿಸಿ ಬಂದಿದ್ದರು. ನಾನೂ ಮೊದಲನೇ ಸಾರಿ ಆಗ ಆರಿಸಿಬಂದಿದ್ದೆ. ನಂಜೇಗೌಡರು, ವಾಟಾಳ್ ನಾಗರಾಜ್ ಅವರು, ದೇವೇಗೌಡರು 1967 ರಲ್ಲಿದ್ದರು. ಜಯಪ್ರಕಾಶ್ ನಾರಾಯಣ್ ಅವರು ಒಳ್ಳೆಯ ವಿದ್ಯಾಸಂಸ್ಥೆಗಳನ್ನು ಕಟ್ಟಿದ್ದರು. ಈಗತಾನೇ ಅಲ್ಲಿ ಪಕ್ಕದಲ್ಲೇ ಇದ್ದಂತ ವಿದ್ಯಾಸಂಸ್ಥೆಗೆ ಹೋಗಿ ಬಂದೆ. ಮಿಡ್ಲ್‌ಸ್ಕೂಲಿನಿಂದ ಡಿಗ್ರಿವರೆಗೂ ಮಾಡಿದ್ದಾರೆ. ಅಂಬೇಡ್ಕರ್ ಅವರ ಹೆಸರಿನಲ್ಲಿ ಇಂಜಿನಿಯರಿಂಗ್ ಕಾಲೇಜ್ ಕೂಡ ಮಾಡಿ ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ವಿದ್ಯಾ ಕ್ಷೇತ್ರದಲ್ಲಂತೂ ಬಹಳ ಶ್ರಮವಹಿಸಿ ಅದರಲ್ಲೂ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಹಿಂದುಳಿದವರಿಗೆ ಹೆಚ್ಚು ಅವಕಾಶ ಮಾಡಿಕೊಟ್ಟು ತುಂಬಾ ಸಹಾಯ ಮಾಡಿದ್ದಾರೆ. ಅವರ ಸೇವೆಯನ್ನಂತೂ ನಾವೆಲ್ಲಾ ಸ್ಮರಿಸಬೇಕಾದುದು ನಮ್ಮ ಕರ್ತವ್ಯವಾಗಿದೆ. ಕಳೆದ ವಾರ ಅವರು ನನ್ನ ಇಲಾಖೆಗೆ ಸಂಬಂಧಪಟ್ಟ ಒಂದು ಪ್ರಶ್ನೆ ಕೇಳಿದ್ದರು. ಅನುದಾನ ಕೊಡುವುದರ ಬಗ್ಗೆ ಪರಿಶಿಷ್ಟ ಜಾತಿ ವರ್ಗದ ಕಾಲೇಜುಗಳ ಬಗ್ಗೆ ಏನಾದರೂ ಮಾಡಬೇಕು ಎಂದು ಹೇಳಿದ್ದರು. ಅದಕ್ಕೆ ನಾನು ಹೇಳಿದ ಸರ್ಕಾರ ಪರಿಶೀಲನೆ ಮಾಡುತ್ತದೆ ಎಂದು. ಈ ರೀತಿ ಅಂಬೇಡ್ಕರ್ ಮೆಡಿಕಲ್ ಕಾಲೇಜ್ ಇದೆಯಲ್ಲ ಅದರಲ್ಲೂ ಕೂಡ ಅವರು ಮ್ಯಾನೇಜಿಂಗ್ ಟ್ರಸ್ಟಿಯಾಗಿ ಕೆಲಸ ಮಾಡಿದ್ದಾರೆ. ಆ ಕಾಲೇಜನ್ನು ಇವತ್ತಿನ ದಿವಸ ಬಹಳ ಉನ್ನತ ಮಟ್ಟಕ್ಕೆ ತರುವುದಕ್ಕೆ ತುಂಬಾ ಪ್ರಯತ್ನ ಮಾಡಿದ್ದಾರೆ. ಅಂಥ ಮಹನೀಯರು ಇವತ್ತಿನ ದಿವಸ ನಮ್ಮನ್ನು ಅಗಲಿದ್ದಾರೆ. ಅದಕ್ಕೆ ನಾನು ಈಗ ಅಂತಿಮ ಗೌರವವನ್ನು ಸಲ್ಲಿಸಿ ಬಂದೆ. ಅದೇರೀತಿಯಲ್ಲಿ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಚಂದ್ರಕಾಂತ ಜಿ.ಬೆಲ್ಲದ್ (ಧಾರವಾಡ) : ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಅನೇಕ ಹಿರಿಯರು ಸನ್ಮಾನ್ಯ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ಅವರ ಸಮಿಪದ ಪರಿಚಯದಿಂದ ಅವರ ಕಾರ್ಯಗಳನ್ನು ಕಂಡಂಥ ಜನರು, ಹುರಿಯರು ಅವರ ಬಗ್ಗೆ ಸಂತಾಪ ಸೂಚಿಸಿ ನಮ್ಮನ್ನು ಅಗಿಲಿರುವುದರಿಂದ ಅಗಿರುವ ದುಃಖದ ಬಗ್ಗೆ ಮಾತನಾಡಿದ್ದಾರೆ. ಆದರೆ ಜಯಪ್ರಕಾಶ್ ನಾರಾಯಣ್ ಅವರನ್ನು ನಾನು ಸಮಿಪದಿಂದ ಕಂಡಿಲ್ಲ. ಆದರೆ ನಮ್ಮ ಸದನದಲ್ಲಿದ್ದರು. ಈಗ ಎಲ್ಲ ಹಿರಿಯರು ಮಾತನಾಡಿದ್ದನ್ನು ನೋಡಿದರೆ ಅಂಥ ಒಬ್ಬ ಅಪ್ರತಿಮವಾದಂಥ ವ್ಯಕ್ತಿ ತುಳಿತಕ್ಕೆ ಒಳಗಾದಂಥ ಸಮಾಜದ ಸಲುವಾಗಿ ಸತತವಾಗಿ ಚಿಂತನೆ ಮಾಡಿ ತನುಮನಧನಗಳಿಂದ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟು ಸಮಾಜದ ಏಳಿಗೆಗಾಗಿ, ತುಳಿತಕ್ಕೆ ಒಳಗಾದಂಥ ಜನರ ಏಳಿಗೆಗಾಗಿ ಸತತವಾಗಿ ಶ್ರಮಿಸಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಜನರನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಬೆಳವಣಿಗೆ ಮಾಡಲಿಕ್ಕೆ ತಮ್ಮನ್ನು ತಾವು ತೊಡಗಿಸಿ ಕೊಂಡಂಥ ಒಬ್ಬ ನಾಯಕರು ಇವತ್ತು ನಮ್ಮಲ್ಲರಿಂದ ಅಗಲಿದ್ದಾರೆ.

ನನಗೆ ಅಪಾರವಾದಂಥ ದುಃಖ ಆಗಿದೆ. ಮತ್ತು ಅವರ ಸಮಾಜಕ್ಕೂ ಕೂಡ ಅಪಾರವಾದ ದುಃಖ ಆಗಿ ಅಂಥ ಒಬ್ಬ ನಾಯಕರು ಅಗಲಿರುವುದಕ್ಕೆ ಎಲ್ಲರಿಗೂ ಬಹಳ ದುಃಖವಾಗಿದೆ. ಇವತ್ತು ಅವರ ಕುಟುಂಬಕ್ಕೆ ಆದಂಥ ದುಃಖ ಏನಿದೆ, ತಾಪ ಏನಿದೆ ಅದರಲ್ಲಿ ನಾವೆಲ್ಲರೂ ಭಾಗಿಗಳಾಗಿದ್ದೇವೆ. ಅವರು ಮಾಡಿದಂಥ ಕಾರ್ಯ ಶಾಶ್ವತವಾಗಿ ಉಳಿಯಬೇಕು. ಅಂಥ ಒಬ್ಬ ವ್ಯಕ್ತಿ ಏನು ತಮ್ಮ ಜೀವನದಲ್ಲಿ ಮಾಡಿ ಸಮಾಜದ ಏಳಿಗೆಗೆ, ಜನತೆಯ ಕಲ್ಯಾಣಕ್ಕಾಗಿ ಮಾಡಿದ್ದಾರೆ ಅದು ಶಾಶ್ವತವಾಗಿ

ಉಳಿಯಬೇಕು. ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಸಮಾಜದ ಸಲುವಾಗಿ ಎಷ್ಟೊಂದು ಉತ್ತಮವಾದಂಥ ಕಾರ್ಯಗಳನ್ನು ಮಾಡಬಲ್ಲ ಅನ್ನುವುದನ್ನು ತೋರಿಸಿಕೊಟ್ಟಂಥ ಒಬ್ಬ ಧೀಮಂತ ವ್ಯಕ್ತಿ. ಅದೂ ತುಳಿತಕ್ಕೆ ಒಳಗಾದಂಥ ಜನರು ಆ ಕಾಲದಿಂದಲೂ ಸಹ ಯಾವ ಜನರ ಸಲುವಾಗಿ ಧ್ವನಿ ಎತ್ತಿ ಮಾತನಾಡಲಿಕ್ಕೆ ಸಾಧ್ಯವಿರಲಿಲ್ಲ ಅಂಥ ಕಾಲದಲ್ಲಿ ಡಾಕ್ಟರ್ ಅಂಬೇಡ್ಕರ್ ಅವರ ಜೀವನವನ್ನು ನೆನಸಿಕೊಂಡು ಅವರ ಮಾರ್ಗದರ್ಶನದಲ್ಲಿ ನಡೆದಂಥ ಒಬ್ಬ ವ್ಯಕ್ತಿ ಇವತ್ತು ನಮ್ಮಿಂದ ಆಗಲಿದ್ದಾರೆ. ಸನ್ಮಾನ್ಯ ನಾಯಕರು ಅವರ ಜೀವನದ, ಅವರು ಮಾಡಿದಂಥ ಕಾರ್ಯವು ಮುಂದಿನ ಜನಾಂಗಕ್ಕೆ ಉಳಿಯುವಂಥ ಕಾರ್ಯದಲ್ಲಿ ಅವರಿಗೆ ಸೇವೆ ಮಾಡಬೇಕು ಎಂದು ಹೇಳಿ ವಿನಂತಿಸಿ ಅವರ ಕುಟುಂಬಕ್ಕೆ, ಅವರ ಸಮಾಜಕ್ಕೆ ಆದಂಥ ನಷ್ಟದಲ್ಲಿ ನಾವೂ ಪಾಲುದಾರರಾಗಿದ್ದೇವೆ ಎಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತಿದ್ದೇನೆ.

+ ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಬೆಳಗ್ಗೆ ನಾನು ಸದನಕ್ಕೆ ಬಂದಂಥ ಸಮಯದಲ್ಲಿ ಈ ವಾರ್ತೆಯನ್ನು ಕೇಳಿ ದಿಗ್ಭ್ರಮೆ ಜೊತೆಗೆ ಅತೀವ ದುಃಖ ಆಯಿತು. ಏಕೆಂದರೆ ಕಳೆದ ಹನ್ನೊಂದು ವರ್ಷಗಳಿಂದ ಅವರ ಜೊತೆಗೆ ನಾನು ಸಂಬಂಧವನ್ನು ಇಟ್ಟುಕೊಂಡಿದ್ದೆ. ನಮ್ಮ ಸಮಾಜದಲ್ಲಿ ಅತೀ ಹಿರಿಯರು ಮತ್ತು ಈ ಸಮಾಜದ ಬಗ್ಗೆ ತನ್ನದೇ ಆದ ಕಾಳಜಿಯನ್ನು ಕಳಕಳಿಯನ್ನು ಇಟ್ಟುಕೊಂಡು ಅವರ ಜೀವಿತದದ ಕಾಲದಲ್ಲಿ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಂತೂ ಅವರು ಮಾಡಿರತಕ್ಕ ಸೇವೆ ಈ ಸಮಾಜಕ್ಕೆ ಕೊಟ್ಟಿರತಕ್ಕ ಕೊಡುಗೆ ಅತ್ಯಂತ ಅವಿಸ್ಮರಣೀಯ ಎಂದರೆ ತಪ್ಪಾಗಲಿಕ್ಕಿಲ್ಲ. ನಾನು ಪ್ರಾರಂಭದಲ್ಲಿ 1985ನೇ ಇಸವಿಯಲ್ಲಿ ಶಾಸಕನಾಗಿ ಬಂದಾಗ ಅವರ ಅಂಬೇಡ್ಕರ್ ಮೆಡಿಕಲ್ ಕಾಲೇಜಿನಲ್ಲಿ ದೊಡ್ಡ ಗಲಾಟೆಯಾಯಿತು. ಈ ಮನೆಯಲ್ಲಿರತಕ್ಕ ಬಹುತೇಕ ಎಲ್ಲ ಹಿರಿಯ ಸದಸ್ಯರಿಗೆ ಅದು ಗೊತ್ತಿದೆ. ಆ ಕಾಲದಿಂದಲೂ ಅವರ ಹೋರಾಟದ ಜೊತೆಗೆ ನಾನೂ ಬಂದಿದ್ದೇನೆ. ಮಾನ್ಯ ಸಚಿವರಾದ ಶ್ರೀಮಾನ್ ಜಯಕುಮಾರ್ ಅವರು ಹೇಳಿದಹಾಗೆ ಕಳೆದ ಎರಡು ವರ್ಷಗಳ ಹಿಂದಿನಿಂದ ಈ ಪಕ್ಷದ ಸಂಘಟನೆ ವಿಚಾರದಲ್ಲಂತೂ ಅವರ ಆರೋಗ್ಯ ಅಷ್ಟು ಪ್ರೋತ್ಸಾಹದಾಯಕ ಪರಿಸ್ಥಿತಿಯಲ್ಲಲ್ಲದಿದ್ದರೂ ಕೂಡ ತಮ್ಮ ಸೇವೆಯನ್ನು ಕನಿಷ್ಠವಾದರೂ ಕೂಡ ಪಕ್ಷಕ್ಕೆ ಕೊಡಬೇಕೆಂಬ ದೃಷ್ಟಿಯಿಂದ ಹಗಲುರಾತ್ರಿ ನಮ್ಮ ಜೊತೆಗೆ ದುಡಿದ್ದನ್ನು ಕೂಡ ನಮ್ಮ ಸ್ನೇಹಿತರು ಈ ಸಂದರ್ಭದಲ್ಲಿ ಸ್ಮರಿಸಿದರು.

ಹೀಗೆ ಒಟ್ಟಾರೆ ಅವರ ಸಾವಿನಿಂದ ನಮ್ಮ ಪಕ್ಷಕ್ಕೆ ಅಷ್ಟೇ ಅಲ್ಲ, ನಮ್ಮ ದಲಿತ ಸಮಾಜಕ್ಕೆ ಸಾರ್ವಜನಿಕ ರಂಗಕ್ಕೆ ಅಪಾರವಾದ ನಷ್ಟವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಕುಟುಂಬಕ್ಕೆ ಅವರ ಸಾವಿನಿಂದ ಆಗಿರತಕ್ಕ ದುಃಖವನ್ನು ಭರಿಸತಕ್ಕ ಶಕ್ತಿ ವೃದ್ಧಿಯಾಗಲಿ, ಹಾಗೆ ಇವತ್ತು ಶಿಕ್ಷಣ ಕ್ಷೇತ್ರದಲ್ಲಿ ಅವರ ಸಾವಿನಿಂದ ಅವರು ಕಟ್ಟಿರತಕ್ಕ ತನ್ನದೇ ಆದ ರಾಜ್ಯ ಬಹುಶಃ ಇವತ್ತು ಕೊರಗುತ್ತದೆ. ಸಾವಿರಾರು, ಲಕ್ಷಾಂತರ ಜನರಿಗೆ ಅವರು ಆ ಕ್ಷೇತ್ರದ ಮೂಲಕ ಸಹಾಯ ಮಾಡುತ್ತಿದ್ದರು. ಪುನಃ ಆ ಕ್ಷೇತ್ರವನ್ನು ನಡೆಸಿಕೊಂಡು ಹೋಗುವುದಕ್ಕೆ ಕಷ್ಟವಾಗಬಹುದು. ಇದೆಲ್ಲಕ್ಕೂ ಕೂಡ ಮಾನ್ಯ ಸಭಾ ನಾಯಕರು ಅವರ ಕುಟುಂಬ ವರ್ಗದವರನ್ನು ಕರೆಸಿ ಅವರಿಗೆ ಧೈರ್ಯ ಮತ್ತು ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಹೇಳಿ ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿ, ಮಾನ್ಯ ಸಭಾ ನಾಯಕರು ತಂದಿರತಕ್ಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಸವರಾಜು : ಮಾನ್ಯ ಉಪಾಧ್ಯಕ್ಷರೆ, ಶ್ರೀಮಾನ್ ಜಯಪ್ರಕಾಶ್ ನಾರಾಯಣ್‌ರವರನ್ನು ನಾನು ಅವರ ಮೆನೆಯಲ್ಲಿ ಬಹಳಷ್ಟು ವರ್ಷಗಳ ಹಿಂದೆ ಇಂಜಿನಿಯರಿಂಗ್ ಸೀಟಿನ ಸಲುವಾಗಿ ಭೇಟಿಯಾಗಿದ್ದೆ. ಒಬ್ಬ ಪರಿಶಿಷ್ಟ ಜಾತಿಯ ವಿದ್ಯಾರ್ಥಿಯನ್ನು ಕರೆದುಕೊಂಡು ಹೋದಾಗ ಅದರಲ್ಲೂ ಅವರು ಈ ರಾಜ್ಯದವರಲ್ಲ, ಬೇರೆ ರಾಜ್ಯದರವಾಗಿದ್ದರೂ ಕೂಡ ಒಂದು ಮಾನ್ಯತೆ ನೀಡಿ, ನಮ್ಮ ಜನಾಂಗ ಮುಂದೆ ಬರಬೇಕು, ಈ ಜನಾಂಗವನ್ನು ಈ ಸಮಾಜದಲ್ಲಿ ಒಂದು ರೀತಿ ಕಡಗಣಿಸುವಂತಹ ಪ್ರವೃತ್ತಿಯನ್ನು ಇನ್ನು ಮುಂದಾದರೂ ತಪ್ಪಿಸಬೇಕು. ಈ ರಾಜ್ಯದವರೆ ಅಲ್ಲ, ಬೇರೆ ರಾಜ್ಯದವರು ಇದ್ದರೂ ಕೂಡ, ನಾನು ಅಂತಹ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಕಲ್ಪಿಸುವಂತಹ ಒಂದು ಸಂದರ್ಭ ನನಗೆ ಬಂದಿದೆ. ಈ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟು ಕೊಡಿಸುವ ವ್ಯವಸ್ಥೆ ಮಾಡುತ್ತೇನೆಂಬ ಒಂದು ಉತ್ತಮ ಉದ್ದೇಶವನ್ನು ಇಟ್ಟುಕೊಂಡು ಅಂತಹ ವಿದ್ಯಾರ್ಥಿಗಳಿಗೆ ಒಂದು ಮಾರ್ಗದರ್ಶಕರಾಗಿ, ಹಿತಚಿಂತರಾಗಿ ಅವರು ದುಡಿಯುತ್ತಾ ಇದ್ದರು. ನಾನು ವೈಯಕ್ತಿಕವಾಗಿ ಹೇಳಬೇಕಾದರೆ, ಅವರ ಸಾವಿನಿಂದ ಪರಿಶಿಷ್ಟ ಜಾತಿ ಯವರಿಗೆ ತುಂಬಲಾರದ ನಷ್ಟವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ಆಗಿರುವ ನಷ್ಟವನ್ನು ದೇವರು ಭರಿಸುವ ಶಕ್ತಿಯನ್ನು ಕೊಡಲೆಂದು ನಾನು ದೇವರಲ್ಲಿ ಪ್ರಾರ್ಥಿಸಿಕೊಂಡು ಈ ಸಂತಾಪ ಸೂಚಕವನ್ನು ಈ ಸಭೆಯಲ್ಲಿ ತಂದು ಅದರ ಮಂಡನೆಗೆ ನನ್ನ ಬೆಂಬಲವನ್ನು ಸೂಚಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಹೊಳಿಹೊನ್ನಾರು) : ಮಾನ್ಯ ಉಪಾಧ್ಯಕ್ಷರೆ, ಇದೀಗ ನನಗೆ ತಿಳಿಯಿತು. ಸನ್ಯಾನ್ಯ ಜಪ್ರಕಾಶ್ ನಾರಯಣ್‌ರವರು ನಿಧನರಾದರು ಎಂದು ಸನ್ಯಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್‌ರವರೊಡನೆ ನನ್ನ ಸ್ನೇಹಿತ್ವ ಸುಮಾರು 1967ನೇ ಇಸವಿಯಿಂದ ಇತ್ತು. ನಾನು ಅವರು 1967ರಲ್ಲಿ ಈ ಮನೆಯ ಶಾಸಕನಾಗಿ ಕೆಲಸ ಮಾಡಿದ್ದೇವೆ. ಅವರು ಒಳ್ಳೆಯ ಸಂಸದೀಯ ಪಟು. ಹಿಂದುಳಿದ ವರ್ಗದವರ ಬಗ್ಗೆ ಅದರಲ್ಲೂ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಬಗ್ಗೆ ಅಪಾರವಾದ ಕಳಕಳಿಯನ್ನು ಹೊಂದಿರತಕ್ಕ ಒಬ್ಬ ವ್ಯಕ್ತಿ ಅಷ್ಟೇ ಅಲ್ಲ, ಈ ಶಾಸನ ಸಭೆಯಲ್ಲಿ ಕೆಲಸ ಮಾಡುವಾಗ, ರಚನಾತ್ಮಕ ಸಲಹೆಗಳನ್ನು ಕೊಟ್ಟು ಪರಿಶಿಷ್ಟ ಜಾತಿಯವರಿಗೆ ಆದ ಅನ್ಯಾಯದ ಬಗ್ಗೆ ಸದಾ ಹೊಡೆದಾಡುತ್ತಾ ಇದ್ದಂತಹ ಒಬ್ಬ ವ್ಯಕ್ತಿ. ಶಿಕ್ಷಣ ಸಂಸ್ಥೆಯಲ್ಲಿ ಪ್ರತಿಭಾವಂತ ವ್ಯಕ್ತಿಯಾಗಿ ಅಲ್ಲಿ ಪರಿಶಿಷ್ಟ ಜಾತಿಯವರ, ದುರ್ಬಲವರ್ಗದವರ ರಕ್ಷಣೆಯ ಬಗ್ಗೆ ಅಪಾರವಾದ ಕಳಕಳಿ ವಹಿಸಿ ಒಂದು ಶಿಕ್ಷಣ ಸಂಸ್ಥೆಯನ್ನು ಒಂದು ಮಾದರಿ ಸಂಸ್ಥೆಯನ್ನಾಗಿ ಮಾಡಿಕೊಂಡು ಬಂದಂತಹ ಒಬ್ಬ ವ್ಯಕ್ತಿ. ಮೊನ್ನೆ ತಾನೆ ಯಲಹಂಕದಲ್ಲಿ ಚುನಾವಣೆಗೆ ನಿಲ್ಲುವ ಸಂದರ್ಭದಲ್ಲಿ ಅವರು-ನಾವು ಒಂದಾಗಿ ಅವರ ಗೆಲುವಿಗೆ ನಾನೂ ಸಹ ಸಹಕಾರಿಯಾಗಿದ್ದೆ. ನನ್ನ ಗೆಲುವಿಗೆ ಅವರೂ ಸಹ ಸಹಾಕಾರಿ ಯಾಗಿದ್ದರು. ಹಿಂದುಳಿದವರ್ಗದವರ ಬಗ್ಗೆ, ಪರಿಶಿಷ್ಟ ಜಾತಿಯವರ ಬಗ್ಗೆ ಅಪಾರ ಕಳಕಳಿ ಹೊಂದಿರತಕ್ಕ ವ್ಯಕ್ತಿ, ಅವರ ಪ್ರಗತಿಯ ಬಗ್ಗೆ ಸದಾ ಚಿಂತನೆ ಮಾಡತಕ್ಕ ಒಬ್ಬ ವ್ಯಕ್ತಿ ನಮ್ಮನ್ನು ಬಿಟ್ಟು ಅಗಲಿದ್ದಾರೆ. ನಿಜವಾಗಿಯೂ ಈ ದುರ್ಬಲ ವರ್ಗದವರಿಗೆ ಅಪಾರವಾದ ನಷ್ಟವಾಗಿದೆ. ಅವರ ಆತ್ಮಕ್ಕೆ ಈ ಸಂದರ್ಭದಲ್ಲಿ ಚಿರಶಾಂತಿಯನ್ನು ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಗೌರವವನ್ನು ಸೂಚಿಸಬೇಕು.

(ಸದನದ ಎಲ್ಲ ಸದಸ್ಯರು ಎದ್ದು ನಿಂತು ಮೃತರಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿದರು)

ಈ ಸಂತಾಪ ಸೂಚಕ ನಿರ್ಣಯವನ್ನು ಅವರ ಕುಟುಂಬ ವರ್ಗ ಕಳುಹಿಸಿಕೊಡಲಾಗುವುದು. ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಗ್ಗೆ ಪುನಃ ಸೇರುವುದು.

(ಸಭೆಯ ಕಾರ್ಯಕಲಾಪಗಳನ್ನು ಬೆಳಿಗ್ಗೆ 10-55ಕ್ಕೆ ಮುಂದಾಗಿ ನಾಳೆ ದಿನಾಂಕ 7-4-95ರಂದು ಬೆಳಿಗ್ಗೆ 9-30 ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಸರ್ಕಾರಿ ಹೊರವಲಯ ಮುದ್ರಣಾಲಯ, ಬೆಂಗಳೂರು – 560 059